# ಟ್ಯಾಗೋರ್ ಮತ್ತು ಗಾಂಧಿಯವರ ಶೈಕ್ಷಣಿಕ ಆದರ್ಶಗಳು – ಒಂದು ತುಲನಾತ್ಮಕ ಅಧ್ಯಯನ

**ಪ್ರೊ.ರೊಮೇಶ್ ಆಚಾರ್ಯ**

ಗಾಂಧಿ ಮತ್ತು ಟ್ಯಾಗೋರ್ ಅವರ ಲೋಕದೃಷ್ಟಿಯಲ್ಲಿರುವ ಮೂಲಭೂತ ವ್ಯತ್ಯಾಸಗಳು ಶಿಕ್ಷಣದ ಕುರಿತಾಗಿನ ಅವರ ಬರವಣಿಗೆಗಳಲ್ಲಿ ನಮಗೆ ಕಾಣಸಿಗುತ್ತವೆ. ಕಲಾತ್ಮಕ ಮನೋಪ್ರವೃತ್ತಿಯ ಟ್ಯಾಗೋರ್ ಅವರಿಗೆ 'ಬಿಡುವು' ಎಂಬುದು ಅರ್ಥಪೂರ್ಣ ಬದುಕಿನ ಮೂಲಾಧಾರವಾಗಿದ್ದರೆ, ಶ್ರಮಜೀವಿಯಾದ ಗಾಂಧಿಯವರಿಗೆ 'ದುಡಿಮೆ' ಎಂಬುದು ಆದರ್ಶ ಸಮಾಜ ನಿರ್ಮಿಸುವುದಕ್ಕಾಗಿ ಮಾನವ ಸಮುದಾಯದ ಶಕ್ತಿಯನ್ನು ಒಗ್ಗೂಡಿಸಲು ಅನುಸರಿಸಬೇಕಾದ ಪ್ರಮುಖ ಮಾರ್ಗವಾಗಿತ್ತು. ಈ ಲೇಖನವು ಇಬ್ಬರು ಶ್ರೇಷ್ಠ ಭಾರತೀಯ ಚಿಂತಕರಾದ ರಬೀಂದ್ರನಾಥ ಟ್ಯಾಗೋರ್ ಮತ್ತು ಮೋಹನದಾಸ ಕರಮಚಂದ ಗಾಂಧಿಯವರ ಶೈಕ್ಷಣಿಕ ಆದರ್ಶಗಳ ಮಹತ್ವವನ್ನು ಅರ್ಥಮಾಡಿಕೊಳ್ಳುವ ಒಂದು ವಿನಯಪೂರ್ಣ ಪ್ರಯತ್ನವಷ್ಟೇ ಎಂದು ಆರಂಭದಲ್ಲಿಯೇ ನಾನು ಸ್ಪಷ್ಟಪಡಿಸಲು ಬಯಸುತ್ತೇನೆ. ಭಾರತದ ಆರ್ಥಿಕ ವ್ಯವಸ್ಥೆಯ ಈ ಪರ್ವ ಕಾಲದಲ್ಲಿ ಈ ತುಲನಾತ್ಮಕ ಅಧ್ಯಯನವು ಹೆಚ್ಚು ಪ್ರಸ್ತುತವಾಗಬಹುದು ಎಂಬುದು ನನ್ನ ನಂಬಿಕೆ. ಅಷ್ಟೇ ಅಲ್ಲದೆ, ನಮ್ಮ ಪ್ರಸಕ್ತ ಶಿಕ್ಷಣ ವ್ಯವಸ್ಥೆಯು ನಮ್ಮ ಶ್ರೇಷ್ಠ ಶೈಕ್ಷಣಿಕ ಚಿಂತಕರು ಪ್ರತಿಪಾದಿಸಿದ ಆದರ್ಶಕ್ಕಿಂತ ಎಷ್ಟು ಭಿನ್ನವಾಗಿ ರೂಪುಗೊಂಡಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಕೂಡ ಈ ಅಧ್ಯಯನವು ಒಂದು ಅವಕಾಶವನ್ನು ಒದಗಿಸಬಹುದು. ಹೀಗೆ ಅವಲೋಕಿಸುವಾಗ ಆದರ್ಶ ಮತ್ತು ವಾಸ್ತವದ ನಡುವಿನ ಅಂತರವು ನಮ್ಮನ್ನು ನಿರಾಶೆಗೊಳಿಸಬಹುದು. ಆದರೆ ಅದು ನಮ್ಮನ್ನು ವಿಚಲಿತಗೊಳಿಸಬೇಕಾಗಿಲ್ಲ, ಏಕೆಂದರೆ ನಮ್ಮ ದೇಶದ ಶೈಕ್ಷಣಿಕ ಆದರ್ಶಗಳ ಇತಿಹಾಸವೇ ತೋರಿಸಿಕೊಟ್ಟಂತೆ ಒಂದು ದೇಶದ ಶೈಕ್ಷಣಿಕ ವ್ಯವಸ್ಥೆಯು ಅಂತಿಮವಾಗಿರೂಪುಗೊಳ್ಳುವುದು ಅದರ ಶ್ರೇಷ್ಠ ಶೈಕ್ಷಣಿಕ ಚಿಂತಕರ ವಿಚಾರಧಾರೆಗಳಿಂದ ಅಲ್ಲ, ಬದಲಾಗಿ ಔಚಿತ್ಯಗಳಿಂದ; ಇನ್ನೊಂದರ್ಥದಲ್ಲಿ ಹೇಳುವುದಾದರೆ, ಮಾರುಕಟ್ಟೆ ಶಕ್ತಿಗಳಿಂದ.. ಹಾಗೆಂದು, ಒಂದು ದೇಶದ ಶೈಕ್ಷಣಿಕ ವ್ಯವಸ್ಥೆಯ ನಿರ್ಮಾಣದಲ್ಲಿ ಶೈಕ್ಷಣಿಕ ಚಿಂತಕರ ಯಾವುದೇ ಪಾತ್ರ ಇಲ್ಲವೆಂದಲ್ಲ; ಯಾವುದೇ ಶೈಕ್ಷಣಿಕ ವ್ಯವಸ್ಥೆಯು, ಅನೇಕ ಮಹಾನ್ ಶಿಕ್ಷಕರಿಂದ ಪ್ರಭಾವಿತವಾಗಿರುವ ಕುರುಹುಗಳು ದೊರೆಯುತ್ತವೆ. ಯಾವುದೇ ಅಭಿಮತವು ಸಂಪೂರ್ಣವಾಗಿ ಕಳೆದುಹೋಗಿದೆ ಎಂದು ಕೂಡ ಅಲ್ಲ. ಆದರೆ ರೂಸೋ, ಡ್ಯೂಯಿ, ಟ್ಯಾಗೋರ್ ಮತ್ತು ಗಾಂಧಿಯವರಂತಹ ಹಲವು ಶ್ರೇಷ್ಠ ಶಿಕ್ಷಣ ಶಾಸ್ತ್ರಜ್ಞರು ಪ್ರತಿಪಾದಿಸಿದ, ಪ್ರಾಯೋಗಿಕವಾಗಿ ಮಾಡಿತೋರಿಸಿದ ಶೈಕ್ಷಣಿಕ ಮಾದರಿಗಳನ್ನು ಯಾವುದೇ ದೇಶವು ತನ್ನ ಶಿಕ್ಷಣ ವ್ಯವಸ್ಥೆಯ ಮೂಲಾಧಾರವಾಗಿ ಪರಿಗಣಿಸಿಲ್ಲವೆಂಬುದು ಕೂಡ ಅಷ್ಟೇ ಕಟುಸತ್ಯ.

ಚಾಲ್ತಿಯಲ್ಲಿರುವ ಶೈಕ್ಷಣಿಕ ನಿಲುವು ಮತ್ತು ನಂಬಿಕೆಗಳ ನಿಟ್ಟಿನಲ್ಲಿ, ಟ್ಯಾಗೋರ್ ಮತ್ತು ಗಾಂಧಿಯವರ ಶೈಕ್ಷಣಿಕ ಆದರ್ಶಗಳನ್ನು ವಸ್ತುನಿಷ್ಠವಾಗಿ ಅಧ್ಯಯನ ಮಾಡುವುದು ತುಸು ಕಷ್ಟದ ಕೆಲಸವೆ ಸರಿ. ಅಷ್ಟೇ ಅಲ್ಲದೆ, ಟ್ಯಾಗೋರ್ ಅವರನ್ನು ಅರ್ಥಮಾಡಿಕೊಳ್ಳುವುದು ಗಾಂಧಿಯವರನ್ನು ಅರ್ಥಮಾಡಿಕೊಳ್ಳುವುದಕ್ಕಿಂತಲೂ ಸ್ವಲ್ಪ ಕಠಿಣವೆಂದು ನನಗನ್ನಿಸುತ್ತದೆ; ಬಹುಶಃ ಅವರ ಮೋಹಕ ಬರವಣಿಗೆ ಇದಕ್ಕೆ ಕಾರಣವಿರಬಹುದು. ಟ್ಯಾಗೋರ್ ಅವರ ಬರವಣಿಗೆಯ ಶೈಲಿಯು ವಿಶ್ಲೇಷಣಾತ್ಮಕವಾಗಿರದೆ ಹೆಚ್ಚು ರೂಪಕಾಲಂಕಾರಿಕವಾಗಿರುತ್ತದೆ. ಹಾಗಾಗಿ ಅದು ನಮ್ಮ ಮಸ್ತಿಷ್ಕವನ್ನು ತಟ್ಟುವುದಕ್ಕಿಂತ ಹೆಚ್ಚಾಗಿ ಹೃದಯವನ್ನು ತಟ್ಟುತ್ತದೆ. ಎಷ್ಟೆಂದರೂ ಟ್ಯಾಗೋರ್ ಒಬ್ಬ ಕವಿ ಮತ್ತು ಶಿಕ್ಷಣದ ಬಗೆಗಿನ ಅವರ ಕಲ್ಪನೆಗಳು ಕವಿ ಮನಸ್ಸಿನ ಕಲ್ಪನೆಗಳು ಮತ್ತು ಜಗತ್ತಿನ ಎಲ್ಲೆಡೆಯಿಂದ ಒಳಿತನ್ನು ಅರಸುವ ಸಾರಸಂಗ್ರಹಿ ಪ್ರವೃತ್ತಿಯವು. ಹಾಗಾಗಿ ವಿಭಿನ್ನ ವಿಶ್ಲೇಷಣೆಗಳಿಗೆ ಟ್ಯಾಗೋರ್ ಅವರು ತಮ್ಮನ್ನು ಒಡ್ಡಿಕೊಳ್ಳುವುದು ನಮಗೆ

ಆಶ್ಚರ್ಯವೆನಿಸುವುದಿಲ್ಲ. ಇನ್ನೊಂದೆಡೆ ನೈತಿಕ ರಾಜಕಾರಣದ ಪ್ರವರ್ತಕರಾದ ಗಾಂಧಿಯವರು ಸಾಮಾನ್ಯ ಜನರ ಆಶೋತ್ತರಗಳಿಗೆ ಅವರ ನೆಲೆಯಲ್ಲಿಯೇ ಪರಿಪೂರ್ಣವಾಗಿ ಸ್ಪಂದಿಸಬಲ್ಲವರಾಗಿದ್ದು, ಅವರ ಯೋಚನೆ ಮತ್ತು ಅಭಿವ್ಯಕ್ತಿ ಕೂಡ ಜನಸಾಮಾನ್ಯರ ಭಾಷೆಯಲ್ಲಿಯೇ ಇದ್ದುದರಿಂದ ಶಿಕ್ಷಣದ ಬಗೆಗಿನ ಅವರ ವಿಚಾರಧಾರೆಗಳು ನೇರ ಮತ್ತು ಸ್ಪಷ್ಟವಾಗಿದ್ದವು. ಗಾಂಧಿಯವರಿಗೆ ಶಿಕ್ಷಣವೆಂಬುದು ಅವರ ನೈತಿಕತೆಯನ್ನಾಧರಿಸಿದ ರಾಜಕಾರಣದ ಕಾರ್ಯಸೂಚಿಯ ಒಂದು ಅವಿಭಾಜ್ಯ ಅಂಗವಾಗಿತ್ತು. ಅವರಂತೆ ಶೈಕ್ಷಣಿಕ ರಾಜಕಾರಣವನ್ನು ನಿರ್ವಹಿಸಿದ ಇನ್ನೊಬ್ಬ ಭಾರತೀಯ ಶಿಕ್ಷಣ ಶಾಸ್ತ್ರಜ್ಞ ಅಥವ ರಾಜಕಾರಣಿಯಿಲ್ಲವೆಂದು ನಾವು ಧೈರ್ಯವಾಗಿ ಹೇಳಬಹುದು. ಬಹುಶಃ ಟ್ಯಾಗೋರ್ ಮತ್ತು ಗಾಂಧಿಯವರ ನಡುವಿನ ಮುಖ್ಯ ವ್ಯತ್ಯಾಸ ನಮಗೆ ಇಲ್ಲೇ ಕಾಣಸಿಗುವುದು. ಆದರೆ ಶಿಕ್ಷಣದ ಕುರಿತಾಗಿನ ಅವರ ಪರಿಕಲ್ಪನೆಯಲ್ಲಿ, ಅದರಲ್ಲೂ ಮುಖ್ಯವಾಗಿ ದಾರ್ಶನಿಕ ನೆಲೆಯಲ್ಲಿ ಅವರು ಶಿಕ್ಷಣವನ್ನು ಪರಿಭಾವಿಸಿದ ರೀತಿಯಲ್ಲಿ ಇರುವ ಸಾಮ್ಯತೆಗಳನ್ನು ಗುರುತಿಸುವುದು ಕಷ್ಟವಲ್ಲ. ಆದರೆ ಶೈಕ್ಷಣಿಕ ಉದ್ದೇಶದ ಕುರಿತಾಗಿನ ಅವರ ಮೂಲಧೋರಣೆಗಳಲ್ಲಿ ಇರುವ ವ್ಯತ್ಯಾಸಗಳನ್ನು ಗಣನೆಗೆ ತೆಗೆದುಕೊಳ್ಳದೆ ಹೋಗುವುದೆಂದರೆ ನಾವು ಮೂಲ ಶಿಕ್ಷಣದ ಉದ್ದೇಶವನ್ನೇ ಮರೆತಂತೆ. ಅಷ್ಟಕ್ಕೂ, ಟ್ಯಾಗೋರ್ ಮತ್ತು ಗಾಂಧಿಯವರೇ ಹಲವು ಸಂದರ್ಭಗಳಲ್ಲಿ ಶಿಕ್ಷಣದ ಕುರಿತು ತಮ್ಮ ಧೋರಣೆಗಳಲ್ಲಿ ಇರುವ ಭಿನ್ನಾಭಿಪ್ರಾಯದ ಕುರಿತು ಮುಕ್ತವಾಗಿ ಮಾತನಾಡಿದ್ದಾರೆ.

ಆದರೆ ಇಲ್ಲಿಯವರೆಗೆ ಈ ವಿಷಯವನ್ನು ನಿರ್ವಹಿಸಿದ ವಿದ್ವಾಂಸರೆಲ್ಲರೂ ಇವರಿಬ್ಬರ ನಡುವಿನ ಭಿನ್ನತೆಗಿಂತ ಸಾಮ್ಯತೆಗೆ ಒತ್ತುನೀಡಿದ್ದಾರೆ. 'ವಿಶ್ವ-ಭಾರತಿ' ತ್ರೈಮಾಸಿಕವು 1947ರಲ್ಲಿ ಸ್ವತಂತ್ರ ಭಾರತದಲ್ಲಿ ಶಿಕ್ಷಣವು ಎದುರಿಸಬಹುದಾದ ಸವಾಲುಗಳಿಗೆ ಸಂಬಂಧಿಸಿದಂತೆ ಒಂದು ವಿಶೇಷ ಸಂಚಿಕೆಯನ್ನು ಹೊರತಂದಿತು. ಈ ಸಂಚಿಕೆಯ ಉದ್ದೇಶ, ಉತ್ತರಗಳನ್ನು ಕೊಡುವ ಬದಲಾಗಿ ಪ್ರಶ್ನೆಗಳನ್ನು ಮುಂದಿಡುವುದಾಗಿತ್ತು. ಇದರಲ್ಲಿ ಟ್ಯಾಗೋರ್ ಮತ್ತು ಗಾಂಧಿಯವರ ಶೈಕ್ಷಣಿಕ ಆದರ್ಶ ಮತ್ತು ಪ್ರಯೋಗಗಳನ್ನು ಕುರಿತಂತೆ ಭಾರತದಾದ್ಯಂತ ಪ್ರಮುಖ ವಿದ್ವಾಂಸರು ಬರೆದ ಮುಖ್ಯ ಲೇಖನಗಳನ್ನು ಪ್ರಕಟಿಸಲಾಗಿತ್ತು. ನನಗನ್ನಿಸುವಂತೆ, ಆ ಕಾಲದಲ್ಲಿ ಶುರುಮಾಡಿದ ಈ ಚರ್ಚೆಯನ್ನು ನಮ್ಮ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯನ್ನು ಕಟ್ಟುವ ನಿಟ್ಟಿನಲ್ಲಿ ಮುಂದುವರಿಸಿಕೊಂಡು ಹೋಗಬೇಕಿತ್ತು. ಆದರೆ ದುರಾದೃಷ್ಟವಶಾತ್, ನಮ್ಮ ದೇಶದ ಶೈಕ್ಷಣಿಕ ಸಂವಾದವು ನೆಹರು ಅವರ ಆಧುನೀಕರಣದ ಕಾರ್ಯಸೂಚಿಯಲ್ಲಿ ಹೊಸ ತಿರುವನ್ನು ಪಡೆದುಕೊಂಡಿತು. ಟ್ಯಾಗೋರ್ ಮತ್ತು ಗಾಂಧಿ ಇಬ್ಬರೂ ನಮ್ಮ ರಾಷ್ಟ್ರೀಯ ಸಂವಾದಗಳಲ್ಲಿ ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಂಡು, ಕೇವಲ ರಸ್ತೆಯ, 'ಕಟ್ಟಡ'ಗಳ ಹೆಸರುಗಳಾಗಿ ಮಾತ್ರ ಉಳಿದುಹೋದರು. ಪ್ರತಿ ನಗರದಲ್ಲಿಯೂ ನಮಗೆ ಗಾಂಧಿ ಹೆಸರಿನ ಒಂದು ರಸ್ತೆ ಮತ್ತು 'ಒಂದು ರವೀಂದ್ರ ಭವನ' ಕಾಣಸಿಗುತ್ತದೆ. ಇಷ್ಟೆಲ್ಲದರ ನಡುವೆ ನಮ್ಮ ರಾಷ್ಟ್ರೀಯ ಶಿಕ್ಷಣ ಪದ್ಧತಿಯು ಬ್ರಿಟಿಷರು ರೂಪಿಸಿದ ಪರಸ್ಪರ ಪ್ರತ್ಯೇಕವಾದ, ಪಠ್ಯಾಧಾರಿತ ಶೈಕ್ಷಣಿಕ ಮಾದರಿಯನ್ನು ವಸಾಹತುಶಾಹಿ ವ್ಯವಸ್ಥೆಯಬಳುವಳಿಯಾಗಿ ಮುಂದುವರಿಸಿಕೊಂಡು ಹೋಗುತ್ತಿದೆ.

## II

ಹತ್ತೊಂಬತ್ತನೆಯ ಶತಮಾನದ ಕೊನೆಯ ಹೊತ್ತಿಗೆ ಭಾರತದ ಪ್ರಭಾವಿ ಮಧ್ಯಮವರ್ಗದಲ್ಲಿ ಇಂಗ್ಲಿಷ್ ಶಿಕ್ಷಣದ ಕುರಿತಾದ ಮೋಹವು ಶತಮಾನದ ಆರಂಭದಲ್ಲಿ ಇದ್ದುದಕ್ಕಿಂತ ಕಡಿಮೆಯಾಗುತ್ತಾ ಬಂದಿತ್ತು. ಸಂಪೂರ್ಣವಾಗಿ ಇಂಗ್ಲಿಷ್ ಶಿಕ್ಷಣವನ್ನು ತೊರೆಯದೆ ಹೋದರೂ, ಇಂಗ್ಲಿಷ್ ಭಾಷೆಯ ಪ್ರತಿಷ್ಠೆ ಮತ್ತು ಪ್ರಬೋಧನೆಯಲ್ಲಿನ ಅದರ ಪಾತ್ರದ ಕುರಿತು ಸಾಕಷ್ಟು ಮಟ್ಟಿಗೆ ಭ್ರಮನಿರಸನ ಉಂಟಾಗಿತ್ತು. ಶತಮಾನದ ಕೊನೆಯ ಹೊತ್ತಿಗೆ ಭಾರತದಲ್ಲಿ ಶಿಕ್ಷಣದ ಕುರಿತಾದ ಸಂವಾದವು ಒಂದು ಹೊಸ ತಿರುವನ್ನು ಪಡೆದುಕೊಂಡಿತ್ತು. ಭಾರತೀಯ ಮನಸ್ಸುಗಳ ಮೇಲೆ ಮೆಕಾಲೆಯ ಪ್ರಭಾವ ಕಡಿಮೆಯಾಗಿ

ಅದರ ಸ್ಥಾನವನ್ನು ರಾಷ್ಟ್ರಾಭಿಮಾನದ ಕಲ್ಪನೆಯು ತುಂಬಿಕೊಂಡಿತು. ಮಾತೃಭಾಷೆ ಮತ್ತು ರಾಷ್ಟ್ರೀಯ ಸಂಸ್ಕೃತಿಯು ಶಿಕ್ಷಣದ ಕುರಿತಾದ ಸಂವಾದಗಳಲ್ಲಿ ಮನ್ನಣೆ ಮತ್ತು ಗೌರವದ ಸ್ಥಾನವನ್ನು ಪಡೆದುಕೊಂಡಿತು. ಹೀಗಿರುವಾಗ ಟ್ಯಾಗೋರ್ ಮತ್ತು ಗಾಂಧಿಯವರು ಶಿಕ್ಷಣದ ಕುರಿತಾದತಮ್ಮ ಸಂವಾದಗಳನ್ನು ವಸಾಹತುಶಾಹಿ ಶಿಕ್ಷಣ ವ್ಯವಸ್ಥೆಯ ವಿಮರ್ಶೆಯೊಂದಿಗೆ ಶುರುಮಾಡಿದ್ದರಲ್ಲಿ ಆಶ್ಚರ್ಯವಿರಲಿಲ್ಲ. ನಮ್ಮದೇ ಆದ ಶಿಕ್ಷಣ ವ್ಯವಸ್ಥೆಯನ್ನು ಕಟ್ಟಬೇಕು ಎಂಬ ಅಭಿಲಾಶೆಯು ಅವರು ತಮ್ಮದೇ ಆದ ಶೈಕ್ಷಣಿಕ ಆದರ್ಶಗಳನ್ನು ಬೆಳೆಸುವಂತೆ ಮಾಡಲು ಕಾರಣವಾಯಿತು. ಇದು ಶಿಕ್ಷಣ ಮತ್ತು ಸಮಾಜದ ಕುರಿತಂತೆ ಅವರು ಆರಂಭದಲ್ಲಿಯೇ ಬರೆದ ಲೇಖನಗಳಲ್ಲಿ ನಮಗೆ ಸ್ಪಷ್ಟವಾಗುತ್ತದೆ. ಇದಕ್ಕೆ ಸಂಬಂಧಿಸಿದಂತೆ ನಾವು ಟ್ಯಾಗೋರ್ ಅವರು 1905ರಲ್ಲಿ ಬರೆದ 'ಸ್ವದೇಶಿ ಸಮಾಜ' ಮತ್ತು 1908ರಲ್ಲಿ ಗಾಂಧಿಯವರು ಬರೆದ 'ಹಿಂದ್ ಸ್ವರಾಜ್' ಪ್ರಬಂಧಗಳನ್ನು ಪರಾಮರ್ಶಿಸಬಹುದು. ಈ ಎರಡೂ ಪ್ರಬಂಧಗಳಲ್ಲಿ ನಮಗೆ ಸ್ವಯಂಪೂರ್ಣವಾದ ಗ್ರಾಮೀಣ ಸಮಾಜವನ್ನು ಪುನರುಜ್ಜೀವಿಸುವ ಅವರ ತೀವ್ರ ಹಂಬಲ ಎದ್ದು ಕಾಣಿಸುತ್ತದೆ. ಇಬ್ಬರೂ ಕೂಡ 'ಆತ್ಮಸಾಕ್ಷಿ'ಯು ಸ್ವರಾಜ್ಯದ ಜೀವಾಳ ಎಂಬ ಅಂಶವನ್ನು ಎತ್ತಿಹಿಡಿದಿದ್ದರಲ್ಲದೆ, ಮಾತೃಭಾಷೆಯ ಅವಗಣನೆಯ ಮತ್ತು ಇಂಗ್ಲಿಷ್ ಶಿಕ್ಷಣದ ದುಷ್ಪರಿಣಾಮಗಳನ್ನು ಚರ್ಚಿಸಿದ್ದರು. ಮೂಲತಃ ಕವಿಯಾದ ಟ್ಯಾಗೋರ್, ನಾವು ನಂತರದಲ್ಲಿ ಗಮನಿಸುವಂತೆ, ರಾಷ್ಟ್ರೀಯ ವಾದವನ್ನು ಸಂಪೂರ್ಣವಾಗಿ ತಿರಸ್ಕರಿಸುತ್ತಾರೆ ಮತ್ತು ರಾಷ್ಟ್ರ, ದೇಶಗಳ ಗಡಿಯನ್ನು ಮೀರಬೇಕಾದ ಅವಶ್ಯಕತೆಯನ್ನು ಎತ್ತಿಹಿಡಿಯುತ್ತಾರೆ. ಆದರೆ ಮನುಷ್ಯನ ಅಸ್ತಿತ್ವದಲ್ಲಿ ನೈತಿಕತೆಯ ಮೂಲಸತ್ವವನ್ನು ಎತ್ತಿಹಿಡಿಯುವಲ್ಲಿ ತಮ್ಮ ಜೀವನವನ್ನು ಮುಡಿಪಾಗಿಟ್ಟ ಗಾಂಧಿಯವರು, ಭಾರತೀಯ ಸಂದರ್ಭದಲ್ಲಿ ರಾಷ್ಟ್ರೀಯವಾದದ ಪರಿಕಲ್ಪನೆಯ ಐತಿಹಾಸಿಕ ಪಾತ್ರವನ್ನು ಗೌರವಿಸುವ ಜೊತೆಜೊತೆಗೆ ಅದು ಒಡ್ಡುವ ಮಿತಿಯನ್ನು ಮೀರುವ ಪ್ರಯತ್ನ ಮಾಡುತ್ತಾರೆ. ಟ್ಯಾಗೋರ್ ಮತ್ತು ಗಾಂಧಿಯವರು ಒಂದು ಮಹತ್ತರವಾದ ರಾಷ್ಟ್ರ ಕಲ್ಪನೆಯ ಜಾಗೃತಿಯ ಮೇರುಘಟ್ಟದಲ್ಲಿ ಪ್ರವರ್ಧಮಾನಕ್ಕೆ ಬಂದವರು ಎಂಬುದನ್ನು ನಾವು ಮರೆಯಬಾರದು. ಆದರೆ ಈ ಇಬ್ಬರೂ ಮಹನೀಯರು ಸ್ವಾತಂತ್ರ್ಯಾನಂತರ ವಸ್ತುಸಂಗ್ರಹಾಲಯದಲ್ಲಿನ ಸ್ತಬ್ಧಮೂರ್ತಿಗಳಾಗಿ ಮಾತ್ರ ಉಳಿದುಹೋದದ್ದು ವೈಚಿತ್ರ್ಯ.

ಟ್ಯಾಗೋರ್ ಅವರು ಶಿಕ್ಷಣದ ಕುರಿತಾಗಿಯೇ ಬರೆದ ಲೇಖನಗಳ ಸಂಖ್ಯೆ ನೂರಕ್ಕಿಂತಲೂ ಹೆಚ್ಚಿದೆ. ಇದರ ಹೊರತಾಗಿ, ಅವರ ಇತರ ಲೇಖನಗಳಲ್ಲಿ ಕೂಡ ನಮಗೆ ಶಿಕ್ಷಣದ ಕುರಿತಂತೆ ಅವರ ವಿಚಾರಗಳು ಓದಲು ಸಿಗುತ್ತವೆ. ಇತರ ಹಲವು ಶ್ರೇಷ್ಠ ಶೈಕ್ಷಣಿಕ ಚಿಂತಕರ, ಅದರಲ್ಲೂ ಮುಖ್ಯವಾಗಿ ರೂಸೋ ಮತ್ತು ಡ್ಯೂಯಿಯಂತಹವರ ವಿಚಾರಗಳ ಪ್ರತಿಫಲನದ ಹೊರತಾಗಿಯೂ, ಅವರ ಲೇಖನಗಳಲ್ಲಿ ಅವರದೇ ಆದ ವಿಶಿಷ್ಟ ನಿಲುವು ಎದ್ದುಕಾಣುತ್ತದೆ. ತಮ್ಮ ಈ ವಿಶಿಷ್ಟ ಶೈಕ್ಷಣಿಕ ವಿಚಾರಗಳ ಕಾರಣಕ್ಕಾಗಿ ಶಿಕ್ಷಣ ಕ್ಷೇತ್ರದಲ್ಲಿ ಟ್ಯಾಗೋರ್ ಅವರಿಗೆ ವಿಶೇಷ ಸ್ಥಾನಮಾನವಿದೆ. ಶಿಕ್ಷಣದ ಕುರಿತಾಗಿ ಟ್ಯಾಗೋರರ ಎಲ್ಲ ವಿಚಾರಗಳನ್ನು ವಿಶ್ಲೇಷಿಸುವುದು ಬಿಡಿ, ಅವುಗಳನ್ನು ಪ್ರಸ್ತಾಪಿಸುವುದು ಕೂಡ ನನ್ನ ಈ ಚಿಕ್ಕ ಲೇಖನದ ಮಿತಿಗೆ ಮೀರಿದ್ದು. ಹಾಗಾಗಿ ಟ್ಯಾಗೋರರ ಶೈಕ್ಷಣಿಕ ಆದರ್ಶಗಳನ್ನು ಅರ್ಥಮಾಡಿಕೊಳ್ಳಲು ಅತಿ ಅಗತ್ಯ ಎಂದು ನನಗನಿಸುವ ಕೆಲವು ಪ್ರಮುಖ ಅಂಶಗಳನ್ನಷ್ಟೆ ವಿಶದೀಕರಿಸಿ, ಗಾಂಧಿಯವರ ಶೈಕ್ಷಣಿಕ ಆದರ್ಶಗಳ ಜೊತೆ ಅವುಗಳನ್ನು ತುಲನಾತ್ಮಕವಾಗಿ ನೋಡುವ ಪ್ರಯತ್ನ ಮಾಡುತ್ತೇನೆ.

ಶಿಕ್ಷಣದ ಕುರಿತು ಟ್ಯಾಗೋರ್ ಅವರ ಬರವಣಿಗೆಯನ್ನು ವಿಶಾಲವಾಗಿ ಮೂರು ವರ್ಗಗಳಾಗಿ ವಿಂಗಡಿಸಬಹುದು. ಮೊದಲ ವರ್ಗದಲ್ಲಿ ಅವರು ಭಾರತದಲ್ಲಿ ವಸಾಹತುಶಾಹಿ ಇಂಗ್ಲಿಷ್ ಶಿಕ್ಷಣದ ಇತಿಮಿತಿಗಳ ಕುರಿತಂತೆ ಬರೆದ ವಿಮರ್ಶಾತ್ಮಕ ಲೇಖನಗಳನ್ನು ಸೇರಿಸಬಹುದು. ಉದಾಹರಣೆಗೆ 1893ರಲ್ಲಿ ಬರೆದ 'ಶಿಕ್ಷರ್ ಹರ್‌ಫರ್', 1915ರಲ್ಲಿ ಬರೆದ

ಶಿಕ್ಷರ್ ಬಹಾನ್, '1933ರಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯದಲ್ಲಿ ಮಾಡಿದ ಭಾಷಣ 'ಶಿಕ್ಷರ್ ಬಿಕಿರಣ್', 1936ರಲ್ಲಿ 'ಶಿಕ್ಷರ್ ಸ್ವಂಗೀಕರಣ್' ಕುರಿತಂತೆ 'ನ್ಯೂ ಎಜುಕೇಶನ್ ಫೆಲೊಶಿಪ್' ಭಾಷಣ ಮತ್ತು ಇತರೆ ಕೆಲವು ಬರವಣಿಗೆಗಳು. ಈ ಲೇಖನಗಳಲ್ಲಿ ಅವರು ಮುಖ್ಯವಾಗಿ ಶಿಕ್ಷಣದ ಸಾರ್ವತ್ರೀಕರಣವು ಎದುರಿಸುತ್ತಿರುವ ಸವಾಲುಗಳ ಹಿನ್ನೆಲೆಯಲ್ಲಿ ಶಿಕ್ಷಣ ಮಾಧ್ಯಮದ ಪಾತ್ರವನ್ನು ಮತ್ತು ವಸಾಹತುಶಾಹಿ ಶಿಕ್ಷಣದ ಇತಿಮಿತಿಗಳನ್ನು ಚರ್ಚಿಸುತ್ತಾರೆ. ಮಾತೃಭಾಷೆಯ ಸ್ಥಾನದಲ್ಲಿ ಶಿಕ್ಷಣ ಮಾಧ್ಯಮವಾಗಿ ಇಂಗ್ಲಿಷಿನ ಬಳಕೆಯನ್ನು ಅವರು ತೀವ್ರವಾಗಿ ಖಂಡಿಸುತ್ತಾರೆ. ಅತ್ಯಂತ ಭಾವನಾತ್ಮಕವಾಗಿ ಅವರು ಮಾತೃಭಾಷೆಯ ಪರ ವಕಾಲತ್ತು ವಹಿಸುತ್ತಾರೆ: 'ಶಿಕ್ಷಾಯ ಮಾತೃಭಾಷಾಯೀ ಮಾತೃದುಗ್ದ,'[2] ಅಂದರೆ 'ಶಿಕ್ಷಣದಲ್ಲಿ ಮಾತೃಭಾಷೆಯು ತಾಯಿಯ ಎದೆಹಾಲಿಗೆ ಸಮಾನ'ವೆಂದು ಅವರು ಹೇಳುತ್ತಾರೆ. ಉನ್ನತ ಹಂತದವರೆಗಿನ ಶಿಕ್ಷಣವನ್ನು ಕೂಡ ಮಾತೃಭಾಷೆಯಲ್ಲಿಯೇ ಕೈಗೊಳ್ಳಬೇಕೆಂಬುದು ಅವರ ನಿಲುವಾಗಿತ್ತು. ಅವರು ಇಂಗ್ಲಿಷನ್ನು ಕೂಡ ಮಾತೃಭಾಷೆಯ ಮೂಲಕ ಕಲಿಸುತ್ತಿದ್ದರು ಮತ್ತು ಅದಕ್ಕಾಗಿ 'ಅಂಗ್ರೇಜಿ ಸೋಪಾನ್' ಎಂಬ ಕೈಪಿಡಿಯನ್ನು ಕೂಡ ಬರೆದಿದ್ದರು. ಬಂಗಾಳಿ ಮಾತೃಭಾಷೆಯ ಮಕ್ಕಳಿಗೆ ಇದು ಇಂಗ್ಲಿಷ್ ಕಲಿಯಲು ಒಂದು ಅತ್ಯುತ್ತಮ ವಿಧಾನವೆಂದು ಹಲವು ವಿದ್ವಾಂಸರು ಅಭಿಪ್ರಾಯಪಟ್ಟಿದ್ದರು. ಟ್ಯಾಗೋರ್ ಅವರು ಒಂದು ಬಂಗಾಳಿ ವಿಶ್ವವಿದ್ಯಾಲಯವನ್ನು ರೂಪಿಸುವ ಕನಸು ಕಂಡಿದ್ದರು. 'ಗಾಢಾಂಧಕಾರದಲ್ಲಿ ಚಲಿಸುತ್ತಿರುವ ರೈಲಿನ ಬೋಗಿಗಳ ಒಳಗೆ ಮಾತ್ರ ಬೆಳಕು ಇರುವ ಹಾಗಿದೆ, ನಮ್ಮ ಪ್ರಸಕ್ತ ಶಿಕ್ಷಣ ವ್ಯವಸ್ಥೆ. ಒಂದು ಅಗಾಧ ಜನಸಮುದಾಯವನ್ನು ಹೊರಗಿಟ್ಟು, ಕೆಲವೇ ಕೆಲವು ಉಳ್ಳವರಷ್ಟೆ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ.[3] ಮಾತೃಭಾಷೆಯು ಶಿಕ್ಷಣದ ಮಾಧ್ಯವಾಗದ ಹೊರತು ಶಿಕ್ಷಣದ ಸಾವತ್ರೀಕರಣ ಸಾಧ್ಯವಿಲ್ಲ,' ಇಂಗ್ಲಿಷ್ ಮಾಧ್ಯಮದ ಮೂಲಕ ಇದು ಸಾಧ್ಯವಾಗದು ಎಂಬುದು ಅವರ ದೃಢ ನಂಬಿಕೆಯಾಗಿತ್ತು. ಅಷ್ಟೆ ಅಲ್ಲದೆ ಅವರು ಕಂಠಪಾಠವನ್ನಷ್ಟೆ ಪ್ರೋತ್ಸಾಹಿಸುವ ಪರೀಕ್ಷೆ ಮತ್ತು ಪಠ್ಯಪುಸ್ತಕ ಆಧಾರಿತ ಗ್ರಾಂಥಿಕ ಶಿಕ್ಷಣದ ವಿರೋಧಿಯಾಗಿದ್ದರು ಕೂಡ. 'ಕಾಪಿ ಹೊಡೆದು ಬರೆಯುವವರ ಮತ್ತು ಕಂಠಪಾಠ ಮಾಡಿ ಬರೆಯುವವರ ನಡುವೆ ಏನು ವ್ಯತ್ಯಾಸವಿಲ್ಲ., ಏಕೆಂದರೆ ಉರುಹೊಡೆಯುವವರು ಕೂಡ ಪುಸ್ತಕದಲ್ಲಿ ಏನಿದೆಯೋ ಅದನ್ನು ಮಾತ್ರ ಒಪ್ಪಿಸಲು ಶಕ್ತರಾಗಿರುತ್ತಾರೆ,' ಎಂದು ಸ್ಪಷ್ಟವಾಗಿ ಹೇಳಿದ್ದರು.[4]

ಗಾಂಧಿ ಕೂಡ ಮೇಲ್ಕಂಡ ಬಹುಪಾಲು ಅಂಶಗಳ ಬಗ್ಗೆ ಸಹಮತ ಹೊಂದಿದ್ದರು ಎಂಬುದನ್ನು ನಾವು ಇಲ್ಲಿ ಗಮನಿಸಬೇಕು. ಅವರು ಕೂಡ ಪ್ರಸ್ತುತ ಚಾಲ್ತಿಯಲ್ಲಿದ್ದ ಪಠ್ಯಪುಸ್ತಕ ಆಧಾರಿತ ಗ್ರಾಂಥಿಕ ಶಿಕ್ಷಣ ವ್ಯವಸ್ಥೆಯನ್ನು ವಿರೋಧಿಸುತ್ತಿದ್ದರು ಮತ್ತು ಶಿಕ್ಷಣದಲ್ಲಿ ಕಂಠಪಾಠದ ಪದ್ಧತಿಯನ್ನು ಖಂಡಿಸಿದ್ದರು. ಶಾಲೆಯಲ್ಲಿ ಪುಸ್ತಕದ ಹೊರೆಯನ್ನು ಕಡಿಮೆ ಮಾಡುವಂತೆ ಅವರು ಸಲಹೆ ನೀಡಿದ್ದರು. 'ಭಾರತದಂತಹ ಬಡದೇಶದಲ್ಲಿ ಪಠ್ಯಪುಸ್ತಕಗಳನ್ನು ವಿವೇಚನೆಯಿಂದ, ಮಿತಸಂಖ್ಯೆಯಲ್ಲಿ ಬಳಸಬೇಕು; ಇಲ್ಲವಾದಲ್ಲಿ ಬಡಮಕ್ಕಳು ಶಿಕ್ಷಣದ ಅವಕಾಶದಿಂದ ವಂಚಿತರಾಗುತ್ತಾರೆ,' ಎಂಬುದು ಅವರ ಅಭಿಪ್ರಾಯವಾಗಿತ್ತು.[5] ಟ್ಯಾಗೋರ್ ಅವರಂತೆಯೇ ಗಾಂಧಿಯವರು ಕೂಡ ಉನ್ನತ ಹಂತದವರೆಗಿನ ಶಿಕ್ಷಣವುಕೂಡ ಮಾತೃಭಾಷೆಯಲ್ಲಿರಬೇಕು ಎಂದು ಅಭಿಪ್ರಾಯಪಟ್ಟಿದ್ದರು. ಹೀಗಿದ್ದರೂ ಅವರಿಬ್ಬರ ನಡುವೆ ಶಾಲಾ ಶಿಕ್ಷಣ ವ್ಯವಸ್ಥೆಯಲ್ಲಿ ಇಂಗ್ಲಿಷ್ ಭಾಷೆಗೆ ಕೊಡಬೇಕಾದ ಸ್ಥಾನದ ಬಗ್ಗೆ ಗಂಭೀರ ಭಿನ್ನಾಭಿಪ್ರಾಯವಿತ್ತು. ಗಾಂಧಿಯವರು ಮಗುವಿಗೆ 14 ವರ್ಷ ಆಗುವವರೆಗೆ ಇಂಗ್ಲಿಷ್ ಭಾಷೆಯ ಕಲಿಕೆಯನ್ನು ಒಪ್ಪುವುದಿಲ್ಲ ಮತ್ತು ಇದರ ನಂತರವೂ ಎಲ್ಲರೂ ಇಂಗ್ಲಿಷ್ ಕಲಿಯಬೇಕಾಗಿಲ್ಲ ಎಂಬ ಅಭಿಪ್ರಾಯವನ್ನು ಹೊಂದಿದ್ದರು. ಅವರು ರೂಪಿಸಿದ 'ನಯೀ ತಾಲಿಮ್' ಎಂಬ ಶಿಕ್ಷಣ ಪದ್ಧತಿಯಲ್ಲಿ ಇಂಗ್ಲಿಷಿಗೆ ಜಾಗವೇ ಇರಲಿಲ್ಲ.[6] ಇನ್ನೊಂದೆಡೆ ಟ್ಯಾಗೋರ್ ಅವರು ಆರಂಭದಿಂದಲೇ ಇಂಗ್ಲಿಷ್ ಭಾಷೆಯನ್ನು ಒಂದು ಪಠ್ಯವಿಷಯವಾಗಿ ಕಲಿಸುವುದರ ಪರವಾಗಿದ್ದರು. ಅವರು ಶ್ರೀನಿಕೇತನದಲ್ಲಿ ಹಳ್ಳಿಯ ಮಕ್ಕಳಿಗಾಗಿ ಸ್ಥಾಪಿಸಿದ 'ಶಿಕ್ಷಾ ಸತ್ರ'ದಲ್ಲಿ ಮೊದಲನೆಯ ತರಗತಿಯಿಂದಲೆ ಇಂಗ್ಲಿಷನ್ನು

ಕಲಿಸಲಾಗುತ್ತಿತ್ತು.[7] ಇದು ಒಂದರ್ಥದಲ್ಲಿ 'ಶಿಕ್ಷರ್ ಸ್ವಂಗೀಕರಣ್'ನಲ್ಲಿ ಅವರೇ ನೀಡಿದ್ದ ಸಲಹೆಗೆ ವಿರುದ್ಧವಾಗಿತ್ತು. ಅದರಲ್ಲಿ ಅವರು 'ಶಿಕ್ಷಣದಲ್ಲಿ ಮಾತೃಭಾಷೆ ಎಂಬುದು ತಾಯಿಯ ಎದೆಹಾಲಿನಂತೆ' ಎಂದು ಹೇಳಿದ್ದರು. ಬೇರೆಡೆ ಕೂಡ ಅವರು ತಮ್ಮದೇ ಬಾಲ್ಯದ ಅನುಭವವನ್ನು ಉದ್ಧರಿಸುತ್ತಾ, 'ಇಂಗ್ಲಿಷನ್ನು ಒಂದು ಮಗುವು ತನ್ನ ಮಾತೃಭಾಷೆಯಲ್ಲಿ ಸಾಕಷ್ಟು ಪರಿಣಿತಿಯನ್ನು ಪಡೆದುಕೊಂಡ ಮೇಲಷ್ಟೆ ಪರಿಚಯಿಸಬೇಕು,' ಎಂದು ಸಲಹೆಯಿತ್ತಿದ್ದರು. ಟ್ಯಾಗೋರ್ ಅವರಿಗೆ ಹನ್ನೆರಡು ವರ್ಷ ವಯಸ್ಸಾದಾಗ ಇಂಗ್ಲಿಷನ್ನು ಪರಿಚಯಿಸಲಾಗಿತ್ತು ಮತ್ತು ಅಷ್ಟರಲ್ಲಿ ಅವರು ಬಂಗಾಳಿ ಭಾಷೆಯ ಮೇಲೆ ಸಾಕಷ್ಟು ಹಿಡಿತ ಸಾಧಿಸಿದ್ದರು.[8]

ಗಾಂಧಿಯವರು ಈ ವಿಚಾರದಲ್ಲಿ ತುಂಬ ಸುಧಾರಣಾವಾದಿಯಾಗಿದ್ದರು. ಇಂಗ್ಲಿಷನ್ನು ಕಲಿಕಾ ಮಾಧ್ಯಮವಾಗಿಸುವ ಕುರಿತು ಅಥವ ಅದನ್ನು ಒಂದು ಕಡ್ಡಾಯ ಪಠ್ಯವಿಷಯವಾಗಿಸುವ ಕುರಿತು ಅವರ ತೀವ್ರ ವಿರೋಧವಿತ್ತು. "ಭಾರತವನ್ನು ಬಾಧಿಸುತ್ತಿರುವ ಎಲ್ಲಾ ಮೂಢನಂಬಿಕೆಗಳ ಪೈಕಿ,'ಸ್ವಾತಂತ್ರ್ಯ ಎಂದರೇನು ಎಂದು ಅರ್ಥಮಾಡಿಕೊಳ್ಳಲು ಮತ್ತು ವಿಚಾರ ಸ್ಪಷ್ಟತೆಯನ್ನು ಬೆಳೆಸಿಕೊಳ್ಳಲು ಇಂಗ್ಲಿಷ್ ಭಾಷಾ ಜ್ಞಾನ ಅತ್ಯಗತ್ಯ' ಎಂಬುದಕ್ಕಿಂತ ಮಿಗಿಲಾದ ಮೂಢನಂಬಿಕೆ ಬೇರೊಂದಿಲ್ಲ,"[9] ಎಂದು ಅವರು ಬರೆಯುತ್ತಾರೆ. 'ಒಂದು ರಾಷ್ಟ್ರವಾಗಿ ಆತ್ಮಘಾತಕ ಮಾರ್ಗ ಹಿಡಿಯುವುದು ನಮ್ಮ ಉದ್ದೇಶವಾಗಿಲ್ಲದ ಪಕ್ಷದಲ್ಲಿ ನಾವು ಇಂಗ್ಲಿಷನ್ನು ನಮ್ಮ ಆಲೋಚನಾ ಮಾಧ್ಯಮವಾಗಿ ಹೇರಕೂಡದು' ಎಂಬುದು ಅವರ ನಿಲುವಾಗಿತ್ತು. ಈ ವಿಚಾರದಲ್ಲಿ ಗಾಂಧಿ ಮತ್ತು ನವೋದಯ ಕಾಲದ ಬಂಗಾಳಿ ಮಧ್ಯಮವರ್ಗದ ನಡುವೆ ಇರುವ ಕಂದರ ಕುತೂಹಲಹುಟ್ಟಿಸುವಂತಹುದು.[10] ಈ ಬಣದ ಒಬ್ಬ ಪಕ್ಕಾ ಪ್ರತಿನಿಧಿ ಮತ್ತು ಗಣ್ಯ ವಿದ್ವಾಂಸರಾದ ರಾಜೇಂದ್ರಲಾಲ್ ಮಿತ್ರ ಅವರು 'ಇಂಗ್ಲಿಷನ್ನು ತೊರೆಯುವುದೆಂದರೆ 'ಬೌದ್ಧಿಕವಾಗಿ ಆತ್ಮಹತ್ಯೆ' ಮಾಡಿಕೊಳ್ಳುವುದೆಂದರ್ಥ' ಎಂದು ಹೇಳುತ್ತಾರೆ.[11] ಇನ್ನೊಂದೆಡೆ ಗಾಂಧಿಯವರ ಚಿಂತನೆ ಹೀಗೆ ಸಾಗುತ್ತದೆ, "ಒಂದು ವೇಳೆ ಇಂಗ್ಲಿಷಿನಲ್ಲಿಯೇ ಯೋಚನೆ ಮಾಡಬೇಕಾದ ಮತ್ತು ಅದನ್ನು ಇಂಗ್ಲಿಷಿನಲ್ಲಿಯೇ ಅಭಿವ್ಯಕ್ತಿಸಬೇಕಾದ ವೈಕಲ್ಯ ರಾಮಮೋಹನ್ ರಾಯ್ ಅವರಿಗೆ ಮೊದಲಿನಿಂದಲೇ ಇಲ್ಲದೆ ಹೋಗಿದ್ದರೆ ಅವರು ಇನ್ನೂ ಶ್ರೇಷ್ಠ ಸುಧಾರಕರಾಗಿರುತ್ತಿದ್ದರು ಮತ್ತು ಲೋಕಮಾನ್ಯ ತಿಲಕ್ ಅವರು ಇನ್ನೂ ಶ್ರೇಷ್ಠ ವಿದ್ವಾಂಸರಾಗಿರುತ್ತಿದ್ದರು... ಇಂಗ್ಲಿಷ್ ಸಾಹಿತ್ಯದ ಸಮೃದ್ಧ ಬಳುವಳಿ ಅವರಿಗೆ ದಕ್ಕಿದ್ದೇನೋ ನಿಜ ಆದರೆ ಅದು ಅವರಿಗೆ ತಮ್ಮ ಮಾತೃಭಾಷೆಯ ಮೂಲಕವಾಗಿ ಲಭ್ಯವಾಗಬೇಕಾಗಿತ್ತು. ಯಾವುದೇ ಒಂದು ದೇಶವು ಅನುವಾದಕರ ಸಂತತಿಯನ್ನು ಬೆಳೆಸುವ ಮೂಲಕ ಒಂದು ರಾಷ್ಟ್ರವಾಗಿ ರೂಪುಗೊಳ್ಳುವುದಿಲ್ಲ."[12] ಗಾಂಧಿ ಮತ್ತು ಟ್ಯಾಗೋರರ ನಡುವಿನ ಅಭಿಪ್ರಾಯ ಬೇಧಗಳು 1921ರ ಅಸಹಕಾರ ಚಳುವಳಿಯ ಹೊತ್ತಿಗೆ ಇನ್ನೂ ಹೆಚ್ಚಾದವು. ಇಂಗ್ಲಿಷ್ ಶಿಕ್ಷಣದ ಬಗ್ಗೆ ಗಾಂಧಿಯವರು ತಳೆದ ಸಂಪೂರ್ಣ ವಿರೋಧದ ನಿಲುವನ್ನು ಮತ್ತು ವಸಾಹತುಶಾಹಿ ಶಿಕ್ಷಣ ವ್ಯವಸ್ಥೆಯ ವಿರುದ್ಧವಾಗಿ ಅವರು ಸಾರಿದ ಅಸಹಕಾರದ ಕರೆಯನ್ನು ಟ್ಯಾಗೋರ್ ಒಪ್ಪುವುದಿಲ್ಲ. ಜಗದಾನಂದ ರಾಯ್ ಅವರಿಗೆ ಬರೆದ ಪತ್ರವೊಂದರಲ್ಲಿ ಟ್ಯಾಗೋರ್ ಅವರು ರಾಷ್ಟ್ರೀಯವಾದವನ್ನು ಒಂದು 'ಭೌಗೋಳಿಕ ಭೂತ' ಎಂದು ಖಂಡಿಸುತ್ತಾರೆ. ಅವರು ಬರೆಯುತ್ತಾರೆ: "...ಇಡೀ ಜಗತ್ತು ಈಗ ಈ ಭೂತದ ಭಯದಿಂದ ನಡುಗುತ್ತಿದೆ. ಇದನ್ನು ತೊಲಗಿಸಲು ಇದು ಸೂಕ್ತ ಸಮಯ."[13] ಇದೇ ಸಂದರ್ಭದಲ್ಲಿ ಅವರು 'ಶಿಕ್ಷರ್ ಮಿಲನ್'ಎಂಬ ಪ್ರಸಿದ್ಧ ಲೇಖನವನ್ನು ಪ್ರಕಟಿಸುತ್ತಾರೆ. ಇದು ಮುಂದಕ್ಕೆ ಸಾಕಷ್ಟು ಚರ್ಚೆಗೆ ದಾರಿ ಮಾಡಿಕೊಡುತ್ತದೆ. ಈ ಲೇಖನದಲ್ಲಿ ಟ್ಯಾಗೋರ್ ಅವರು ಪೂರ್ವ ಮತ್ತು ಪಶ್ಚಿಮಗಳ ನಡುವಿನ ಕೊಡುಕೊಳ್ಳುವಿಕೆಯ ಸಂಬಂಧದ ಮಹತ್ವವನ್ನು ಎತ್ತಿಹಿಡಿಯುತ್ತಾರೆ. ಕೊಡುಕೊಳ್ಳುವಿಕೆಯ ಈ ಸಂಸ್ಕೃತಿಯು 'ವಿಶ್ವ-ಭಾರತಿ'ಯ ಮೂಲಸೆಲೆಯೂ ಹೌದು..[14]

ಪಾಶ್ಚಾತ್ಯ ಉಪಭೋಗಿ ಸಂಸ್ಕೃತಿಯ ಪೊಳ್ಳುತನವನ್ನು ಸಮ್ಮತಿಸದ ಟ್ಯಾಗೋರರು ಪೌರಾತ್ಯ ಆಧ್ಯಾತ್ಮಿಕತೆ ಮತ್ತು ತ್ಯಾಗದ ಆದರ್ಶಗಳ ಮೂಲಕ ಪಾಶ್ಚಾತ್ಯ ಸಂಸ್ಕೃತಿಯನ್ನು ಶ್ರೀಮಂತಗೊಳಿಸುವ ಮತ್ತು ಪಾಶ್ಚಾತ್ಯ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನದ ಮೂಲಕ ಪೌರಾತ್ಯ ಜನಜೀವನವನ್ನು ಸುಭದ್ರಗೊಳಿಸುವ ಮಾತುಗಳನ್ನಾಡುತ್ತಾರೆ. ಅಸಹಕಾರ ಚಳುವಳಿ, ಅದರಲ್ಲೂ ಮುಖ್ಯವಾಗಿ ಇಂಗ್ಲಿಷ್ ಶಿಕ್ಷಣವನ್ನು ಸಂಪೂರ್ಣವಾಗಿ ತೊರೆಯುವಂತೆ ಗಾಂಧಿಯವರು ಕೊಟ್ಟ ಕರೆಯನ್ನು ಟ್ಯಾಗೋರರು 'ನಮ್ಮ ರಾಷ್ಟ್ರದ ಬದುಕಿನಲ್ಲಿ ಹೊಸಗಾಳಿ ಒಳಸೂಸದಂತೆ ನಮ್ಮ ಮನೆಯನ್ನು ಬಂದೀಖಾನೆಯಾಗಿಸುವ ಒಂದು ಪ್ರತಿಗಾಮಿ ನಡೆ' ಎಂದು ಖಂಡಿಸುತ್ತಾರೆ.[15] ಇದಕ್ಕೆ ಪ್ರತಿಕ್ರಿಯೆಯಾಗಿ, "ನನಗೆ ನನ್ನ ಮನೆಯ ಸುತ್ತ ಗೋಡೆಗಳನ್ನು ಕಟ್ಟಿ, ಕಿಟಕಿಗಳನ್ನು ಮುಚ್ಚಿಡಬೇಕು ಎಂಬ ಇರಾದೆ ಇಲ್ಲ. ಜಗತ್ತಿನ ಎಲ್ಲಾ ಸಂಸ್ಕೃತಿಗಳ ಗಾಳಿ ನನ್ನ ಮನೆಯೊಳಗೆ ಎಷ್ಟು ಸಾಧ್ಯವೋ ಅಷ್ಟು ಸ್ವಚ್ಛಂದವಾಗಿ ಸುಳಿದಾಡಬೇಕು ಎಂಬ ಬಯಕೆ ನನ್ನದು. ಆದರೆ ಅದು ಯಾವುದೂ ನನ್ನನ್ನು ನನ್ನ ನಿಂತ ನೆಲೆಯಿಂದ ಅಲುಗಾಡಿಸುವುದನ್ನು ನಾನು ಒಪ್ಪಲಾರೆ.[16] ಇಂಗ್ಲಿಷನ್ನು ಕಲಿಯುವ ಬಗ್ಗೆ ನನಗೇನೂ ಅಭ್ಯಂತರವಿಲ್ಲ, ಆದರೆ ಅದು ನಮ್ಮ ಶಿಕ್ಷಣ ವ್ಯವಸ್ಥೆಯ ಮೇಲೆ ಸವಾರಿ ಮಾಡಬಾರದು ಎಂಬುದು ನನ್ನ ಇಂಗಿತ," ಎಂದು ಗಾಂಧಿ ಸ್ಪಷ್ಟಪಡಿಸುತ್ತಾರೆ. ಇಂಗ್ಲಿಷನ್ನು ಶಿಕ್ಷಣದ ಮಾಧ್ಯಮವಾಗಿಸುವುದನ್ನು ಅಥವ ಅದನ್ನು ಎಲ್ಲರಿಗೂ ಕಡ್ಡಾಯ ಕಲಿಕಾ ವಿಷಯವಾಗಿಸುವುದನ್ನು ಅವರು ಒಪ್ಪುವುದಿಲ್ಲ.

## III

ಟ್ಯಾಗೋರರ 'ಶಿಕ್ಷರ್ ಮಿಲನ್' ಲೇಖನವು, ಆ ಸಂದರ್ಭದಲ್ಲಿ ಸಾಕಷ್ಟು ಚರ್ಚೆಗೆ ದಾರಿಮಾಡಿಕೊಡುತ್ತದೆ. ಇತರ ಹಲವು ಚಿಂತಕರು ಕೂಡ ಈ ವಿಚಾರವನ್ನು ಕೈಗೆತ್ತಿಕೊಳ್ಳುತ್ತಾರೆ. ಕಾದಂಬರಿಕಾರ ಶರತ್ಚಂದ್ರ ಚಟ್ಟೋಪಾಧ್ಯಾಯರು ಇದಕ್ಕೆ ಪ್ರತಿಕ್ರಿಯೆಯಾಗಿ 'ಶಿಕ್ಷರ್ ಬಿರೋಧ್' ಎಂಬ ಲೇಖನವನ್ನು ಬರೆಯುತ್ತಾರೆ. 'ಪಾಶ್ಚಾತ್ಯ ಮತ್ತು ಪೌರಾತ್ಯ ಸಂಸ್ಕೃತಿಗಳ ನಡುವೆ ಟ್ಯಾಗೋರ್ ಅವರು ಬಯಸುವಂತಹ ಕೊಡುಕೊಳ್ಳುವಿಕೆಯ ಸಂಬಂಧ ಸಾಧ್ಯವೇ ಇಲ್ಲ' ಎಂಬುದು ಅವರ ಲೇಖನದ ನಿಲುವಾಗಿರುತ್ತದೆ. 'ಪಾಶ್ಚಾತ್ಯರು ಅವರ ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ನಮ್ಮೊಂದಿಗೆ ಹಂಚಿಕೊಳ್ಳುವುದಾಗಲಿ ಅಥವ ನಮ್ಮಿಂದ ಆಧ್ಯಾತಿಕ ಜ್ಞಾನ ಮತ್ತು ತ್ಯಾಗ ಮನೋಭಾವವನ್ನು ಕಲಿತುಕೊಳ್ಳುವುದಾಗಲಿ ಮಾಡಲಾರರು; ಅವರೇನಿದ್ದರೂ ನಮ್ಮನ್ನು ಅವರ ಅನುಕೂಲಕ್ಕೆ ಉಪಯೋಗಿಸಿಕೊಳ್ಳಲು ಸಾಧ್ಯವಾಗುವಂತೆ, ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ನಾವು ಅವರ ಮೇಲೆ ಸದಾ ಅವಲಂಬಿತರಾಗಿರಬೇಕೆಂದು ಬಯಸುತ್ತಾರೆ,' ಎಂಬ ವಾದವನ್ನು ಅವರು ಮುಂದಿಡುತ್ತಾರೆ.[17] ಶರತ್ಚಂದ್ರ ಅವರು ವಸಾಹತುಶಾಹಿ ಶಿಕ್ಷಣದ ವಿರುದ್ಧವಾಗಿ ಗಾಂಧಿಯವರು ಕೊಟ್ಟ ಅಸಹಕಾರ ಚಳುವಳಿಯ ಕರೆಯ ಪರವಾಗಿ ವಾದಿಸುತ್ತಾರೆ ಮತ್ತು 'ಕೆಲವು ಸಂದರ್ಭಗಳಲ್ಲಿ ಶಾಲೆಗೆ ಹೋಗುವುದಕ್ಕಿಂತ ಶಾಲೆಯನ್ನು ಬಹಿಷ್ಕರಿಸುವುದರಲ್ಲಿ ಹೆಚ್ಚಿನ ಕಲಿಕೆ ಸಾಧ್ಯವಿದೆ,' ಎಂದು ಹೇಳುತ್ತಾರೆ.[18] ಇದು ನಮಗೆ ಇವಾನ್ ಇಲ್ಲಿಶ್ ಅವರು ಬರೆದ 'ಡಿಸ್ಕೂಲಿಂಗ್ ಸೊಸೈಟಿ' ಕೃತಿಯನ್ನು ನೆನಪಿಸುತ್ತದೆ.[19]. ಟ್ಯಾಗೋರರ ಶೈಕ್ಷಣಿಕ ಬರಹಗಳ ಪುಸ್ತಕವನ್ನು ಸಂಪಾದಿಸಿರುವ ಸತ್ಯೇಂದ್ರನಾಥ ರಾಯ್ ಅವರಿಗೆ ಶರತ್‌ಚಂದ್ರ ಮತ್ತು ಟ್ಯಾಗೋರ್ ಅವರು ಅವರವರ ಸಂದರ್ಭಗಳಲ್ಲಿ ತೆಗೆದುಕೊಂಡ ನಿಲುವುಗಳಲ್ಲಿ ತಪ್ಪು ಕಾಣಿಸುವುದಿಲ್ಲ. ಅವರ ಪ್ರಕಾರ ಟ್ಯಾಗೋರ್ ಅವರು ಶಿಕ್ಷಣದ ಪರಿಕಲ್ಪನೆಯನ್ನು ದಾರ್ಶನಿಕ ನೆಲೆಯಲ್ಲಿ ಗ್ರಹಿಸಿ, ಅದನ್ನು ವಿಶ್ವವ್ಯಾಪಿ ಸಂದರ್ಭದಲ್ಲಿಟ್ಟು ಚರ್ಚಿಸಿದರೆ, ಶರತ್‌ಚಂದ್ರ ಅವರು ಪ್ರತಿಕ್ರಿಯಿಸುತ್ತಿದ್ದುದು ತಮ್ಮ ಎದುರಿಗಿದ್ದ ರಾಜಕೀಯ ಸಂದರ್ಭಕ್ಕೆ.[20] ಈ ವಾದ ಅಷ್ಟು ಸಮಂಜಸವೆನಿಸುವುದಿಲ್ಲ. ಏಕೆಂದರೆ ಟ್ಯಾಗೋರರ 'ಶಿಕ್ಷರ್ ಮಿಲನ್' ಹೇಗೆ ಒಂದರ್ಥದಲ್ಲಿ ಆ ಹೊತ್ತಿನ ಜ್ವಲಂತ ರಾಜಕೀಯ ಸಮಸ್ಯೆಗಳನ್ನು ಕುರಿತ ಪ್ರತಿಕ್ರಿಯೆಯಾಗಿತ್ತೋ ಹಾಗೆಯೇ ನಮ್ಮ ಪ್ರಸಕ್ತ ಆರ್ಥಿಕ

ಒಲವುಗಳು ಶರತ್‌ಚಂದ್ರ ಅವರು ತಮ್ಮ 'ಶಿಕ್ಷರ್ ಬಿರೋಧ್' ಲೇಖನದಲ್ಲಿ ಮಾಡಿದ ವಾದವನ್ನು ಪುಷ್ಟೀಕರಿಸುವುದಲ್ಲಿ ಯಾವುದೇ ಸಂಶಯವಿಲ್ಲ. ಸತ್ಯೇಂದ್ರನಾಥ್ ರಾಯ್ ಅವರು ಕೂಡ, 'ನಮ್ಮ ಪ್ರಸಕ್ತ ಅನುಭವಗಳು ಶರತ್‌ಚಂದ್ರ ಅವರ ಆತಂಕಗಳನ್ನು ನಾವು ಬೆಂಬಲಿಸುವಂತೆ ಮಾಡುತ್ತವೆ,' ಎಂಬುದನ್ನು ಒಪ್ಪುತ್ತಾರೆ.[21] ಸ್ವಾತಂತ್ರ್ಯ ಸಿಕ್ಕಿದ ಕಾಲದಿಂದ ಸಾಂಸ್ಕೃತಿಕ ಮತ್ತು ಆರ್ಥಿಕ ಕ್ಷೇತ್ರದಲ್ಲಿ ಭಾರತವು ಇತರ ರಾಷ್ಟ್ರಗಳ ಮೇಲಿನ ಅವಲಂಬನೆಯ ರೋಗದಿಂದ ಬಾಧಿತವಾಗಿದೆ. ಇತರೆ ಅತ್ಯಾಧುನಿಕ ಎಲೆಕ್ಟ್ರಾನಿಕ್ ಉತ್ಪನ್ನಗಳನ್ನು ಅಭಿವೃದ್ಧಿಪಡಿಸುವುದಿರಲಿ, ಒಂದು ಶೇವಿಂಗ್ ಬ್ಲೇಡ್ ಮಾಡುವಂತಹ ತಂತ್ರಜ್ಞಾನವನ್ನು ಕೂಡ ಅಭಿವೃದ್ಧಿಪಡಿಸಲು ಭಾರತವು ಸ್ವತಂತ್ರವಾಗಿ ಶಕ್ತವಾಗಿರಲಿಲ್ಲ ಎಂದರೆ ಆಶ್ಚರ್ಯಪಡಬೇಕಾಗಿಲ್ಲ. ಜಾಗತೀಕರಣದ ಹೆಸರಿನಲ್ಲಿ ಭಾರತವನ್ನು ಅಭಿವೃದ್ಧಿ ಹೊಂದಿದ ದೇಶಗಳು ಎಂದು ಕರೆಸಿಕೊಳ್ಳುವ ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಯುರೋಪಿನ ಇತರ ದೇಶಗಳ ಖಾಯಂ ವಸಾಹತನ್ನಾಗಿ ಮಾಡಲಾಗಿದೆ. ವಿದ್ಯುನ್ಮಾನ ಮಾಧ್ಯಮಗಳು ನಮ್ಮ ರಾಷ್ಟ್ರೀಯ ಸಂಸ್ಕೃತಿಯನ್ನು ನಾಶಮಾಡಿ, ಅಭಿವೃದ್ಧಿ ಹೊಂದಿರುವ ದೇಶಗಳೆಂದು ಕರೆಯಲ್ಪಡುವ ಈ ದೇಶಗಳ ಅತ್ಯಂತ ಅನಾಗರಿಕ ಬಂಡವಾಳಶಾಹಿ ಸಂಸ್ಕೃತಿಯನ್ನು ಪ್ರಚಾರಮಾಡುತ್ತವೆ.

ನಮ್ಮ ಅಂಕೆಗೆ ಸಿಗದ ಅಭಿವೃದ್ಧಿಯ ಗತಿಯ ಅಪಾಯವನ್ನು ಗ್ರಹಿಸಲು ಸಾಧ್ಯವಾಗಿದ್ದು ಪ್ರಾಯಶಃ ಗಾಂಧಿಯವರೊಬ್ಬರಿಗೆ ಮಾತ್ರ. ಆಧುನಿಕತಾವಾದದ ಮೇಲೆ ಕಟ್ಟಿದ ಅಭಿವೃದ್ಧಿಯ ಮಾದರಿಯು ಯಾವ ಹಳಿ ಹಿಡಿಯಬಹುದು ಎಂಬುದನ್ನು ಊಹಿಸಬಲ್ಲಂತಹ ದೂರದೃಷ್ಟಿ ಅವರಿಗಿತ್ತು. ಅಭಿವೃದ್ಧಿಯನ್ನು ಸತತ ವಿಕಾಸಾತ್ಮಕ ಪ್ರಕ್ರಿಯೆಯಾಗಿ (evolutionary continum) ಪರಿಗಣಿಸುವಲ್ಲಿ ನಾವು ಮಾಡುವ ತಪ್ಪಿನ ಅರಿವು ಗಾಂಧಿಯವರಿಗಿತ್ತು. ಯುರೋಪ್ ಮತ್ತು ಅಮೆರಿಕದಲ್ಲಿ ಅನುಸರಿಸಿದ ಆಧುನಿಕತೆಯ ಪ್ರಕ್ರಿಯೆಯ ಅಸಮರ್ಪಕತೆಯನ್ನು ಅರ್ಥಮಾಡಿಕೊಳ್ಳಲುಮತ್ತು ಅದರ ನಿರಂಕುಶ ವರ್ತನೆಯನ್ನು ಊಹಿಸಲು ಗಾಂಧಿಯವರು ಸಮರ್ಥರಾಗಿದ್ದರು. ಆ ದೇಶಗಳಲ್ಲಿ ಅನುಸರಿಸಿದ ಪ್ರಕ್ರಿಯೆಗಳನ್ನು ನಮ್ಮಲ್ಲಿ ಕುರುಡಾಗಿ ಅನುಸರಿಸಿರುವ ಬದಲು ಅದಕ್ಕೆ ಪರ್ಯಾಯವನ್ನು ಯೋಚಿಸಿ ಏಕೈಕ ನಾಯಕನೆಂದರೆ ಗಾಂಧಿ. ಮಾನವ ಕುಲದ ಭವಿಷ್ಯತ್ತಿನ ದೃಷ್ಟಿಯಿಂದ ಪಾಶ್ಚಾತ್ಯ ಅಭಿವೃದ್ಧಿ ಮಾದರಿಗೆ ಪರ್ಯಾಯವಾಗಿ ಗ್ರಾಮಾಧಾರಿತ ಆರ್ಥಿಕತೆ ಮತ್ತು ಕಾರ್ಯಾಧಾರಿತ ಶಿಕ್ಷಣ ಪದ್ಧತಿಯನ್ನು ಗಾಂಧಿಯವರು ರೂಪಿಸಿದರು. ಅವರಿಗೆ ಶಿಕ್ಷಣವೆಂಬುದು ಅವರ ಒಟ್ಟಂದದ ರಾಜಕೀಯ ಕಾರ್ಯಕ್ರಮದ ಒಂದು ಭಾಗವಾಗಿತ್ತು. ರಾಜಕೀಯ ಎಂಬುದು 'ಮಾನವ ಮೌಲ್ಯಗಳನ್ನು ಸ್ವತಂತ್ರವಾಗಿಸುವ ಉದ್ದೇಶವಿರುವ ಒಂದು ಪ್ರಕ್ರಿಯೆ' ಎಂದು ಅವರು ನಂಬಿದ್ದರು.

ಗಾಂಧಿಯವರಿಗೆ ಸ್ವರಾಜ್ಯ ಎಂದರೆ ಕೇವಲ ರಾಜಕೀಯ ಸ್ವಾತಂತ್ರ್ಯ ಮಾತ್ರವಾಗಿರಲಿಲ್ಲ. ಅವರ ಪ್ರಕಾರ ಸ್ವರಾಜ್ಯವೆಂದರೆ 'ಜನರ ಕೈಗೆ ಆಡಳಿತ' ಕೊಡುವುದಾಗಿತ್ತು ಹಾಗೂ ದೇಶಭಿಮಾನವೆಂಬುದು 'ಎಲ್ಲಾ ಜನರ ಕ್ಷೇಮಾಭಿವೃದ್ಧಿ'ಯಾಗಿತ್ತು.[22] 'ಸ್ವಪ್ರಯೋಜನಕ್ಕಾಗಿ ಇನ್ನೊಬ್ಬರನ್ನು ದುಡಿಸಿಕೊಳ್ಳುವ ಸಮಾಜದಲ್ಲಿ ಸ್ವರಾಜ್ಯ ಸಾಧ್ಯವಿಲ್ಲ,' ಎಂಬುದು ಅವರ ನಂಬಿಕೆಯಾಗಿತ್ತು. ಜನಸಾಮಾನ್ಯರಿಗೆ ಸ್ವರಾಜ್ಯ ಕೈಗೆಟುಕುವಂತಾಗಬೇಕಾದರೆ ಅವರಿಗಾಗಿ ಒಂದು ರಾಷ್ಟ್ರೀಯ ಶಿಕ್ಷಣ ಯೋಜನೆಯ ಅಗತ್ಯವಿದೆ ಎಂಬುದನ್ನು ಅವರು ಮನಗಂಡಿದ್ದರು. ಅವರದೇ ಮಾತಿನಲ್ಲಿ ಹೇಳುವುದಾದರೆ, "ಸ್ವರಾಜ್ಯದ ಕಡೆಗಿನ ನಮ್ಮ ಪವಿತ್ರಯಾತ್ರೆಯು ಒಂದು ಕಷ್ಟದಾಯಕ ಏರುಹಾದಿ. ಅದು ಸಣ್ಣ ಸಣ್ಣ ವಿಚಾರಗಳತ್ತಲೂ ನಮ್ಮ ಗಮನವನ್ನು ಬಯಸುತ್ತದೆ. ಅಂದರೆ ಅದರ ಅರ್ಥ, ಅಪಾರ ಸಂಘಟನಾ ಸಾಮರ್ಥ್ಯ; ಗ್ರಾಮೀಣ ಜನರ ಸೇವೆಯ ಏಕೈಕ ಉದ್ದೇಶದಿಂದ ನಾವು ಮಾಡಬೇಕಾದ ಗ್ರಾಮ ಪ್ರವೇಶವೆಂದು ಇದನ್ನು ಅರ್ಥೈಸಬಹುದು. ಇನ್ನೊಂದರ್ಥದಲ್ಲಿ ಇದು ರಾಷ್ಟ್ರೀಯ ಶಿಕ್ಷಣ, ಅಂದರೆ ಸಾರ್ವಜನಿಕ

ಶಿಕ್ಷಣ. ಇದರ ಅರ್ಥ ಜನಸಾಮಾನ್ಯರಲ್ಲಿ ರಾಷ್ಟ್ರೀಯ ಪ್ರಜ್ಞೆಯ ಜಾಗೃತಿ."[23] ಗಾಂಧಿಯವರ ಶೈಕ್ಷಣಿಕ ಆದರ್ಶಗಳು ಅವರ ಸ್ವರಾಜ್ಯದ ಕಲ್ಪನೆಯಲ್ಲಿ ಹಾಸುಹೊಕ್ಕಾಗಿರುವುದನ್ನು ನಾವು ಕಾಣುತ್ತೇವೆ.

**IV**

ಗಾಂಧಿಯವರಂತೆಯೇ ಟ್ಯಾಗೋರ್ ಕೂಡ ಗ್ರಾಮೀಣ ಜನರ ಆತ್ಮಶಕ್ತಿಯನ್ನು ಜಾಗೃತಗೊಳಿಸುವ ಮೂಲಕ ಗ್ರಾಮಗಳ ವಿಮೋಚನೆಯನ್ನು ಸಾಧಿಸುವ ಕನಸು ಕಂಡಿದ್ದರು. ರಚನಾತ್ಮಕ ಕೆಲಸಮತ್ತು ಗ್ರಾಮೀಣ ಕ್ಷೇಮಾಭಿವೃದ್ಧಿಗೆ ಹೆಚ್ಚಿನ ಮಹತ್ವವನ್ನು ಕೊಡುವ ಟ್ಯಾಗೋರರು ಆತ್ಮವಿಶ್ವಾಸ ಮತ್ತು ಸ್ವಸಂತೃಪ್ತತೆಯ ಅಗತ್ಯವನ್ನು ಎತ್ತಿಹಿಡಿಯುತ್ತಾರೆ. ಅವರು ತಮ್ಮ ಶೈಕ್ಷಣಿಕ ಪ್ರಯೋಗಗಳನ್ನು ಕೈಗೊಳ್ಳಲು ಆಧುನಿಕ ನಗರ ಪ್ರದೇಶದಿಂದ ದೂರವಾಗಿ, ಪ್ರಕೃತಿಯ ತೆಕ್ಕೆಯಲ್ಲಿರುವ ಬೋಲ್‌ಪುರ್ ಎಂಬ ಹಳ್ಳಿಯನ್ನು ಆರಿಸಿಕೊಂಡಿದ್ದು ಕೂಡ ಅವರ ಆದ್ಯತೆಗೆ ಸಾಕ್ಷಿಯಾಗಿದೆ. ಟ್ಯಾಗೋರ್ ಅವರ ಬರಹಗಳ ಎರಡನೆಯ ವರ್ಗದಲ್ಲಿ ಶಿಕ್ಷಣದ ಕುರಿತಾಗಿ ಅವರು ತಮ್ಮ ಪರಿಕಲ್ಪನೆಯನ್ನು ಬೆಳೆಸುತ್ತಾ ಹೋಗುವುದನ್ನು ನಾವು ನೋಡಬಹುದು: 1909ರಲ್ಲಿ ಬರೆದ 'ತಪೋಬನ್', 1924ರಲ್ಲಿ ಬರೆದ 'ಕವಿಯೊಬ್ಬನ ಶಾಲೆ', (A Poet's School) 1936ರಲ್ಲಿ ಬರೆದ 'ಅಶ್ರಮೆರ್ ಶಿಕ್ಷಾ', 1941ರಲ್ಲಿ, ಅಂದರೆ ಅವರು ನಿಧನರಾದ ವರ್ಷದಲ್ಲಿ ಪ್ರಕಟಿಸಿದ 'ಆಶ್ರಮೆರ್ ರೂಪೋ ವಿಕಾಶ್', ಮತ್ತು 'ವಿಶ್ವ-ಭಾರತಿ' ಎಂಬ ಕಿರುಹೊತ್ತಿಗೆಯಲ್ಲಿ ಪ್ರಕಟವಾಗಿರುವ ಇತರ ಕೆಲವು ಭಾಷಣ ಬರಹಗಳು ಇದಕ್ಕೆ ಉದಾಹರಣೆಗಳು. ಇದರ ಹೊರತಾಗಿ, 'ಶಾಂತಿನಿಕೇತನ್ ವಿದ್ಯಾಲಯೆರ್ ಶಿಕ್ಷಾದರ್ಶನ್' ಎಂಬ ಪುಸ್ತಿಕೆಯಲ್ಲಿ ಪ್ರಕಟವಾದ ಬರಹಗಳು ಮತ್ತು ಶಾಂತಿನಿಕೇತನವನ್ನು ಹೇಗೆ ನಡೆಸಬೇಕು ಎಂಬ ಕುರಿತಾಗಿ ಅವರು ಆಶ್ರಮವಾಸಿಗಳಿಗೆ, ಸ್ನೇಹಿತರಿಗೆ ಮತ್ತು ಬಂಧುಬಳಗದವರಿಗೆ ಬರೆದ ಪತ್ರ ಬರಹಗಳನ್ನು ಅವರ ಬರವಣಿಗೆಯ ಮೂರನೆಯ ವರ್ಗವಾಗಿ ಪರಿಗಣಿಸಬಹುದು.

ನನ್ನ ಪ್ರಕಾರ, ಟ್ಯಾಗೋರ್ ಅವರ ಶೈಕ್ಷಣಿಕ ಮೂಲ ಸಿದ್ಧಾಂತವು ನಮಗೆ ಕಾಣಸಿಗುವುದು ಅವರ 'ತಪೋಬನ್' ಲೇಖನದಲ್ಲಿ. ಟ್ಯಾಗೋರರ ಶೈಕ್ಷಣಿಕ ಆದರ್ಶಗಳ ಬುನಾದಿ ಇದ್ದದ್ದು ಅವರ ದಾರ್ಶನಿಕ ವಿಚಾರಗಳು ಹಾಗೂ ಅದರಲ್ಲೂ ಮುಖ್ಯವಾಗಿ ಅವರ ಉಪನಿಷತ್ತುಗಳ ತಿಳುವಳಿಕೆಯಿಂದ. ಅಷ್ಟೇ ಅಲ್ಲದೆ ಟ್ಯಾಗೋರರು ಸಂಸ್ಕೃತ ಸಾಹಿತ್ಯ ಅದರಲ್ಲೂ ಮುಖ್ಯವಾಗಿ ಕಾಳಿದಾಸನ ಕಾವ್ಯದಲ್ಲಿ ಕಂಡುಬರುವ ಪುರಾತನ ವೈದಿಕ ಮಾದರಿಯ ಕಲಿಕೆ ಮತ್ತು ಬೋಧನೆಯ ವಿಧಾನದಿಂದ ಹೆಚ್ಚು ಪ್ರಭಾವಿತರಾಗಿದ್ದರು. 'ತಪೋಬನ', 'ತಪಸ್ಯ', 'ಆಶ್ರಮ', 'ಸಂಗಮ' ಇತ್ಯಾದಿಯಾಗಿ ಅವರು ಬಳಸುವ ಪದಗಳು ಅವರ ಯೋಚನೆಯ ಧಾಟಿಯನ್ನು ಗುರುತಿಸುವ ಸೂಚಕ ಶಬ್ದಗಳಾಗಿವೆ. ಅವರು ಈ ಪದಗಳನ್ನು ಬಳಸಿರುವುದು ಕೇವಲ ಪ್ರಾಸಂಗಿಕವಲ್ಲ.; ಅದರ ಬಳಕೆಯ ಹಿಂದೆ ನಿರ್ದಿಷ್ಟ ಉದ್ದೇಶವಿದೆ. ಮನುಷ್ಯ ಮತ್ತು ಪ್ರಕೃತಿಯ ನಡುವಿನ ಆಧ್ಯಾತ್ಮಿಕ ಸಂಬಂಧವು ಅವರ ಶಿಕ್ಷಣದ ಪರಿಕಲ್ಪನೆಯ ಮೂಲ ಸೆಲೆಯಾಗಿತ್ತು. 'ಮಕ್ಕಳಿಗೆ ನಿರ್ಮಲ ಪ್ರಕೃತಿಯ ಮಡಿಲಿನಲ್ಲಿ ಸ್ವಚ್ಛಂದವಾಗಿ ಬೆಳೆಯಲು ಅವಕಾಶ ನೀಡಬೇಕು,' ಎಂಬುದು ಟ್ಯಾಗೋರರ ನಿಲುವಾಗಿತ್ತು. ರೂಸೋ ಮತ್ತು ಇಂಗ್ಲಿಷ್ ಸಾಹಿತ್ಯದ ರಮ್ಯತಾಪಂಥಕ್ಕೆ ಸೇರಿದ ಕವಿಗಳಾದ ಶೆಲ್ಲಿ ಮತ್ತು ವರ್ಡ್ಸ್‌ವರ್ತ್ ಅವರ ಪ್ರಭಾವವನ್ನು ಕೂಡ ನಾವು ಟ್ಯಾಗೋರ್ ಅವರಲ್ಲಿ ಕಾಣಬಹುದು. ಟ್ಯಾಗೋರ್ ಕೂಡ ಗಾಂಧಿಯವರಂತೆಯೆ ಶಿಕ್ಷಣಕ್ಕೆ ನಗರ ಪ್ರದೇಶಕ್ಕಿಂತ ಗ್ರಾಮೀಣ ಪರಿಸರವೇ ಹೆಚ್ಚು ಸೂಕ್ತ ಎಂದು ನಂಬಿದ್ದರು. ಈ ವಿಚಾರದಲ್ಲಿ ಅವರು ಅಪ್ರತಿಮ ರಮ್ಯತಾವಾದಿಯಾಗಿದ್ದರು ಎನ್ನುವುದರಲ್ಲಿ ಸಂಶಯವಿಲ್ಲ. ಅವರ ಪ್ರಕಾರ, ಶಿಕ್ಷಣ ಎಂದರೆ ಕಾರ್ಖಾನೆ ಕೆಲಸಕ್ಕೆ ಅಗತ್ಯವಾದ ಕೌಶಲಗಳನ್ನು ಗಳಿಸುವುದಕ್ಕೆ ಅಥವ ಶಾಲಾ ಕಾಲೇಜುಗಳ ಪರೀಕ್ಷೆಗಳಲ್ಲಿ ತೇರ್ಗಡೆಯಾಗುವುದಕ್ಕಷ್ಟೆ ಸೀಮಿತವಾದುದಲ್ಲ; ನಿಜವಾದ ಶಿಕ್ಷಣ ಸಾಧ್ಯವಾಗುವುದು ಅಕಳಂಕಿತ ತಪಸ್ಸಿನ ಮೂಲಕ, ತಪೋಬನದಲ್ಲಿ ಪ್ರಕೃತಿಯೊಂದಿಗಿನ

ಸಮ್ಮಿಲನದೊಂದಿಗೆ.[24] ಅವರು ಬರೆಯುತ್ತಾರೆ, "...ನಮ್ಮ ಶಾಲೆಯಲ್ಲಿ ನಡೆಯುವ ಶಿಕ್ಷಣ ಕೇವಲ ಇಂದ್ರಿಯ ಕೇಂದ್ರಿತ ಶಿಕ್ಷಣ ಅಥವ ಕೇವಲ ಜ್ಞಾನದ ಗಳಿಕೆಗಾಗಿ ಮಾತ್ರ ನಡೆಸುವ ಶಿಕ್ಷಣ ಆಗಬಾರದು; ಬದಲಿಗೆ ಅಲ್ಲಿ 'ಬೋಧಿ'ಗೆ ಅಂದರೆ ದಿವ್ಯಜ್ಞಾನಕ್ಕೆ ಕೂಡ ಸ್ಥಾನವಿರಬೇಕು. "ಅವರು ಮುಂದುವರಿಸಿ ಹೇಳುತ್ತಾರೆ, "ನನ್ನ ಶಾಲೆ ಹುಟ್ಟಿದ್ದು ನನ್ನಲ್ಲಿ ಇದ್ದ ಸ್ವಾತ್ರಂತ್ರ್ಯದ ಅದಮ್ಯ ಬಯಕೆಯ ನೆನಪಿನಿಂದ... ಈ ಜಗತ್ತಿನ ನಮ್ಮ ಸಂಬಂಧಗಳಲ್ಲಿ ನಾವು ಕಂಡುಕೊಳ್ಳುವ ಪರಿಪೂರ್ಣ ಸಾಮರಸ್ಯದಲ್ಲಿ ಹಾಗೂ ಅದರೊಂದಿಗಿನ ಇರುವಿಕೆಯಲ್ಲಿ ನಮ್ಮ ಸಂಪೂರ್ಣ ಸ್ವಾತಂತ್ರ್ಯ ಅಡಗಿದೆಯೇ ಹೊರತು ಅದಕ್ಕೆ ವಿರುದ್ಧವಾಗಿ ಓಡುವುದರಲ್ಲಲ್ಲ."[26] ತಮ್ಮ ಶೈಕ್ಷಣಿಕ ಉದ್ದೇಶದ ಬಗ್ಗೆ ಕವಿಗುರು ಹೀಗೆ ಬರೆಯುತ್ತಾರೆ, "ನಾನು ನನ್ನ ಶಾಲೆಯನ್ನು ನಗರ ಪ್ರದೇಶದಿಂದ ಬಹುದೂರವಾದ ಒಂದು ಸುಂದರ ಪ್ರದೇಶದಲ್ಲಿ ಸ್ಥಾಪಿಸಿದೆ. ಇಲ್ಲಿ ಮಕ್ಕಳಿಗೆ ಪ್ರಾಚೀನ ಮರಗಳ ನೆರಳಿನಲ್ಲಿ, ದಿಗಂತದವರೆಗೂ ವ್ಯಾಪಿಸಿದ ಹಸಿರು ಬಯಲಿನಲ್ಲಿ ಅಗಾಧ ಸ್ವಾತಂತ್ರ್ಯವು ಸಾಧ್ಯವಿತ್ತು... ನಾನು ಮೊದಲಿನಿಂದಲೂ ತರಗತಿ ಬೋಧನೆಗಿಂತಲೂ ಹೆಚ್ಚಾಗಿ ಕಲಿಕಾ ವಾತಾವರಣವೊಂದನ್ನು ಸೃಷ್ಟಿಸುವ ಪ್ರಯತ್ನವನ್ನುಮಾಡಿದೆ.[27]

ಇಷ್ಟಾಗಿಯೂ ಶಾಂತಿನಿಕೇತನ ಶಾಲೆಯು ತಮ್ಮ ಆದರ್ಶಗಳನ್ನು ಮುಂದುವರಿಸಲು ಅಸಮರ್ಥವಾಯಿತು ಎಂದು ಟ್ಯಾಗೋರರು ನಿರಾಶೆಗೊಂಡಿದ್ದರು. ಅವರು ಹೇಳುವಂತೆ, "ಪಾಲಕರ ಒತ್ತಾಯದ ಕಾರಣಕ್ಕೆ ಶಾಂತಿನಿಕೇತನದಲ್ಲಿ ಪರೀಕ್ಷಾ ಪದ್ಧತಿಯನ್ನು ಪರಿಚಯಿಸಬೇಕಾಯಿತು. ಇದರಿಂದಾಗಿ ಸ್ವಾತಂತ್ರ್ಯ ಮತ್ತು ಸಹಜತೆಯ ವಾತಾವರಣ ಕದಡಿತು."[28] ಹಣಕಾಸಿನ ಸಮಸ್ಯೆಯನ್ನು ಸರಿತೂಗಿಸಲು ಹಣವಂತರ ಮಕ್ಕಳನ್ನು ಶಾಲೆಗೆ ಸೇರಿಸಿಕೊಳ್ಳಬೇಕಾದ ಅನಿವಾರ್ಯತೆ ಎದುರಾಗುತ್ತದೆ. ಈ ಪೋಷಕರು ತಮ್ಮ ಮಕ್ಕಳ ವೃತ್ತಿಜೀವನದ ಬಗ್ಗೆ ಹೆಚ್ಚು ಆತಂಕಿತರಾದ ಕಾರಣ ಪರೀಕ್ಷಾ ವ್ಯವಸ್ಥೆಯನ್ನು ಶಿಕ್ಷಣ ಕ್ರಮದಲ್ಲಿ ಅಳವಡಿಸಲು ಒತ್ತಾಯಿಸುತ್ತಾರೆ. ಹಾಗಾಗಿ ಟ್ಯಾಗೋರರು ತಮ್ಮ ಶೈಕ್ಷಣಿಕ ಪ್ರಯೋಗವನ್ನು ಮುಂದುವರಿಸಲು 1924ರಲ್ಲಿ ಅವರದೇ ಮಾತಿನಲ್ಲಿ ಹೇಳುವಂತೆ, "ಕೆಲವು ಅನಾಥ ಹುಡುಗರೊಂದಿಗೆ ಅಥವ ಯಾರ ಪಾಲಕರಿಗೆ ತಮ್ಮ ಮಕ್ಕಳನ್ನು ಯಾವುದೇ ಶಾಲೆಗೆ ಕಳುಹಿಸಲು ಯಾವುದೇ ಸಾಮರ್ಥ್ಯ ಇರಲಿಲ್ಲವೋ ಅವರೊಂದಿಗೆ ಇನ್ನೊಂದು ಶಾಲೆಯನ್ನು ಸ್ಥಾಪಿಸುತ್ತಾರೆ."[29] ಹಣಕಾಸಿನ ತೊಂದರೆಯಿಂದಾಗಿ ಟ್ಯಾಗೋರರು ಆರಂಭದಲ್ಲಿ ಹೆಚ್ಚು ಮಕ್ಕಳನ್ನು ಸೇರಿಸಿಕೊಳ್ಳಲಿಲ್ಲ. ಈ ಶಾಲೆಯ ಬಗ್ಗೆ ಟ್ಯಾಗೋರ್ ಅವರಿಗೆ ಬಹಳ ಭರವಸೆಯಿತ್ತು. ಎಲ್.ಕೆ. ಎಲ್ಮ್ ಹರ್ಸ್ಟ್ ಅವರಿಗೆ ಡಿಸೆಂಬರ್ 19, 1937ರಂದು ಬರೆದ ಪತ್ರದಲ್ಲಿ ಟ್ಯಾಗೋರ್ ಹೀಗೆ ಹೇಳುತ್ತಾರೆ: "ಶಿಕ್ಷಾ ಸತ್ರದ ಶೈಕ್ಷಣಿಕ ಸಾಧ್ಯತೆಗಳ ಬಗ್ಗೆ ನನಗೆ ಶಾಂತಿನಿಕೇತನದಲ್ಲಿರುವ ಶಾಲೆ ಮತ್ತು ಕಾಲೇಜುಗಳಿಗಿಂತ ಹೆಚ್ಚಿನ ಭರವಸೆಯಿದೆ. ಶಾಂತಿನಿಕೇತನದಲ್ಲಿರುವ ಶಾಲೆ, ಕಾಲೇಜುಗಳು ದಿನೇ ದಿನೇ ದೇಶದ ಇತರೆಡೆ ಇರುವ ಶಾಲಾಕಾಲೇಜುಗಳ ರೀತಿಯಂತಾಗುತ್ತಿವೆ: ಈ ಎರವಲು ಪಂಜರಗಳು ವಿದ್ಯಾರ್ಥಿಗಳ ಮನಸ್ಸುಗಳನ್ನು ಸೆರೆಹಿಡಿದ ಹಕ್ಕಿಗಳನ್ನು ನಡೆಸಿಕೊಳ್ಳುವ ರೀತಿಯಲ್ಲಿ ನಡೆಸಿಕೊಳ್ಳುತ್ತವೆ. ಯಾವ ಮಟ್ಟಕ್ಕೆ ವಿದ್ಯಾರ್ಥಿಗಳು ಪಾಠಗಳನ್ನು ಯಾಂತ್ರಿಕವಾಗಿ ಒಪ್ಪಿಸಲು ಶಕ್ತರಾಗಿರುತ್ತಾರೆ ಎಂಬುದರ ಮೇಲೆ ಅವರ ಮಾನವ ಮೌಲ್ಯವನ್ನು ನಿರ್ಣಯಿಸಲಾಗುತ್ತದೆ. ಈ ಪಠ್ಯಕ್ರಮವನ್ನು ರೂಪಿಸಿರುವುದು ಕೂಡ ಸಾಮಾನ್ಯ ಜನಜೀವನದೊಂದಿಗೆ ಸಂಬಂಧವಿರದ ಒಂದು ಅಪರಿಚಿತ ಶಿಕ್ಷಣವ್ಯವಸ್ಥೆ."[30] ಶಿಕ್ಷಾಸತ್ರವುಕ್ಕೆ ತಮ್ಮ ಶೈಕ್ಷಣಿಕ ನಂಬಿಕೆಗಳನ್ನು ಬೆಂಬಲಿಸುತ್ತದೆಂದು ಟ್ಯಾಗೋರ್ ನಂಬಿದ್ದರು. ಆದರೆ ದುರಾದೃಷ್ಟವಶಾತ್, ಅದು ಸಾಧ್ಯವಾಗಲಿಲ್ಲ.

ಸುನಿಲ್‌ಚಂದ್ರ ಸರ್ಕಾರ್ ಪ್ರಕಾರ, "ಶ್ರೀನಿಕೇತನ ಶಾಲೆಯ ಭಿನ್ನತೆ ಏನಿತ್ತೆಂದರೆ, ಅದು ವಿದ್ಯಾರ್ಥಿಗಳಿಗೆ ತಮ್ಮ ಸುತ್ತಲಿನ ಜಗತ್ತಿನ ಅನುಭವವನ್ನು ನೇರವಾಗಿ ಪಡೆದುಕೊಳ್ಳಲು ಸಾಧ್ಯವಾಗುವ ಪ್ರಾಯೋಗಿಕ ವೃತ್ತಿಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ನೀಡಿತ್ತು.."[31] ಆ

ಹೊತ್ತಿಗಾಗಲೆ ಎಲ್.ಕೆ.ಎಲ್ಮ್ ಹರ್ಸ್ಟ್ ಅವರು 'ಸ್ಕೂಲ್ ಆಫ್ ಅಗ್ರಿಕಲ್ಚರ್' ಎಂಬ ಸಂಸ್ಥೆಯ ನಿರ್ದೇಶಕರಾಗಿ ಗ್ರಾಮೀಣ ಪುನರ್‌ನಿರ್ಮಾಣ ಕಾರ್ಯವನ್ನು ಆರಂಭಿಸಿದ್ದರು ಎಂಬುದನ್ನು ನಾವಿಲ್ಲಿ ಗಮನಿಸಬೇಕು. ಟ್ಯಾಗೋರ್ ಅವರು ಈ ಸಂಸ್ಥೆಯ ಛೇರ್‌ಮನ್ ಆಗಿದ್ದರು. ಇದು ಟ್ಯಾಗೋರರ ಶ್ರೀನಿಕೇತನದ ಪ್ರಯೋಗದ ಸಂದರ್ಭದಲ್ಲಿ, ಒಂದು ಗ್ರಾಮೀಣ ಸಮಾಜದ ನಿರ್ದಿಷ್ಟ ಅವಶ್ಯಕತೆಗಳನ್ನು ಗಮನದಲ್ಲಿಟ್ಟುಕೊಂಡು ಸಹಕಾರ ಮತ್ತು ಸ್ವಸಹಾಯ ಪದ್ಧತಿಯ ಮೂಲಕ ಸಮುದಾಯದ ಅಭಿವೃದ್ಧಿಯನ್ನು ಸಾಧ್ಯವಾಗಿಸುವ ನಿಟ್ಟಿನಲ್ಲಿ ಟ್ಯಾಗೋರರು ಹೆಚ್ಚಿನ ಗಮನವನ್ನು ನೀಡಿದರು.ಈ ಸಮಯಕ್ಕಾಗಲೆ ಟ್ಯಾಗೋರ್ ಅವರಿಗೆ ಡ್ಯೂಯಿಯವರ ವಿಚಾರ ಮತ್ತು ಪ್ರಯೋಗಗಳು ಪರಿಚಿತವಾಗಿದ್ದವು. ಇದಕ್ಕೆ ಎಲ್ಮ್‌ಹರ್ಸ್ಟ್ ಅವರೆ ಕಾರಣವಿರಬಹುದು, ಏಕೆಂದರೆ ಅವರು ಡ್ಯೂಯಿಯವರ ವಿದ್ಯಾರ್ಥಿಯಾಗಿದ್ದರು. ಶ್ರೀನಿಕೇತನ ಪ್ರಯೋಗ ಮಾಡುವಲ್ಲಿನ ಪ್ರೇರಣೆ ಟ್ಯಾಗೋರ್ ಅವರದ್ದಾಗಿದ್ದರೂ ಅದರ ಹಿನ್ನೆಲೆಯ ಬುದ್ಧಿಮತ್ತೆ ಎಲ್ಮ್‌ಹರ್ಸ್ಟ್ ಅವರದ್ದಾಗಿತ್ತು. ಶ್ರೀನಿಕೇತನ ಪ್ರಯೋಗ ನಡೆದು ಬಹಳ ವರ್ಷಗಳ ನಂತರವೂ ಶಿಕ್ಷಣದ ಬಗ್ಗೆ ಟ್ಯಾಗೋರರ ನಿಲುವಿನಲ್ಲಿ ಅವರು ಆರಂಭದ ಲೇಖನ 'ತಪೋಬನ' ದಲ್ಲಿ ವ್ಯಕ್ತಪಡಿಸಿದ ವಿಚಾರಗಳಿಗಿಂತ ಹೆಚ್ಚಿನ ಬದಲಾವಣೆಯೇನೂ ಆಗಲಿಲ್ಲ ಎಂಬುದನ್ನು ನಾವು ಗಮನಿಸಬೇಕು. ಅವರು 1909ರಲ್ಲಿ ಬರೆದ 'ತಪೋಬನ್' ಲೇಖನದಲ್ಲಿ ಮಂಡಿಸಿದ ವಿಚಾರಗಳಿಗೂ ಮತ್ತು 1936ರಲ್ಲಿ ಬರೆದ 'ಆಶ್ರಮೆರ್ ಶಿಕ್ಷಾ' ಲೇಖನದಲ್ಲಿ ಮಂಡಿಸುವ ವಿಚಾರಗಳಲ್ಲೂ ಯಾವುದೇ ಮೂಲಭೂತ ವ್ಯತ್ಯಾಸ ಕಂಡುಬರುವುದಿಲ್ಲ. ಹಾಗಾಗಿ ಜನರು ಟ್ಯಾಗೋರರ ಶ್ರೀನಿಕೇತನ ಪ್ರಯೋಗವನ್ನು ಅವರ ಶೈಕ್ಷಣಿಕ ಪ್ರಯೋಗದ ಒಂದು ಪ್ರಮುಖ ರೂಪವಾಗಿ ನೋಡದೆ, ಅವರ ಒಟ್ಟು ಯೋಜನೆಯ ಒಂದು ಅನುಬಂಧವಾಗಿ ನೋಡುವುದರಲ್ಲಿ ಆಶ್ಚರ್ಯವಿಲ್ಲ.

V

ಇಲ್ಲಿ ಒಂದು ಆಸಕ್ತಿಯ ವಿಚಾರವನ್ನು ನಾವು ಗಮನಿಸಬೇಕು: 1901ನೇ ಇಸವಿಯಲ್ಲಿ, ಟ್ಯಾಗೋರರು ಉಪನಿಷತ್ತುಗಳಿಂದ ಪ್ರೇರಿತರಾಗಿ 'ನೈಬೇದ್ಯ' ಎಂಬ ಕಾವ್ಯಮಾಲೆಯನ್ನು ಬರೆಯುತ್ತಿದ್ದ ಕಾಲಕ್ಕೆ, ಭೋಲ್‌ಪುರದಲ್ಲಿ ಬ್ರಹ್ಮಚರ್ಯ ವಿದ್ಯಾಲಯ ಆರಂಭವಾಗುತ್ತದೆ.[32] ಇದೇ ಸಂದರ್ಭದಲ್ಲಿ, ಅಂದರೆ 1902ರ ಕಾಲಘಟ್ಟದಲ್ಲಿ ಬ್ರಹ್ಮಬಾಂಧವ್ ಉಪಾಧ್ಯಾಯರು ಟ್ಯಾಗೋರ್ ಅವರನ್ನು 'ಗುರುದೇವ್' ಎಂದು ಕರೆಯುತ್ತಾರೆ. ಇದರ ನಂತರದಲ್ಲಿ ಟ್ಯಾಗೋರರು 'ಗುರುದೇವ್' ಎಂದೇ ಗುರುತಿಸಲ್ಪಡುತ್ತಾರೆ. ಇದೇ ಸಂದರ್ಭದಲ್ಲಿ ತಮ್ಮ ಶಾಲೆಗೆ ಸಂಬಂಧಪಟ್ಟ ನೀತಿ ನಿಯಮಗಳನ್ನು ರೂಪಿಸುವಾಗ 'ಸಂಹಿತೆ'ಯ ಪ್ರಕಾರ ನಡೆದುಕೊಳ್ಳಬೇಕು ಎಂಬ ಇಂಗಿತವನ್ನು ಕೂಡ ಟ್ಯಾಗೋರರು ವ್ಯಕ್ತಪಡಿಸುತ್ತಾರೆ. ಮನೋರಂಜನ್ ಬಂದೋಪಾಧ್ಯಾಯ ಅವರಿಗೆ ಬರೆಯುವ ಒಂದು ಪತ್ರದಲ್ಲಿ ಟ್ಯಾಗೋರ್ ಅವರು "ಹಿಂದು ಧಾರ್ಮಿಕ ನೀತಿ ನಿಯಮಗಳಿಗೆ ವಿರುದ್ಧವಾದದ್ದು ಯಾವುದೂ ಆಶ್ರಮ ಶಾಲೆಯಲ್ಲಿ ಇರಬಾರದು," ಎಂದು ನಿಖರವಾಗಿ ಬರೆಯುತ್ತಾರೆ. ಅದನ್ನು ಮುಂದುವರಿಸುತ್ತಾ, "ವಿದ್ಯಾರ್ಥಿಗಳು ಸಂಹಿತದಲ್ಲಿ ಹೇಳಿರುವಂತೆ ತಮ್ಮ ಬ್ರಾಹ್ಮಣ ಶಿಕ್ಷಕರಿಗೆ ಕಾಲುಮುಟ್ಟಿ ನಮಸ್ಕಾರ ಮಾಡಬೇಕು. ಆದರೆ ಅಬ್ರಾಹ್ಮಣ ಶಿಕ್ಷಕರಿಗೆ ಕೈಮುಗಿದು ನಮಸ್ಕಾರ ಮಾಡಿದರೆ ಸಾಕು," ಎಂದು ಹೇಳುತ್ತಾರೆ.[33] ತಮ್ಮ ಶೈಕ್ಷಣಿಕ ತತ್ವಾದರ್ಶಗಳನ್ನು ಟ್ಯಾಗೋರ್ ಅವರು 1909ನೇ ಇಸವಿಯಲ್ಲಿ ಬರೆದ 'ತಪೋಬನ' ಲೇಖನದಲ್ಲಿ ವಿಶದೀಕರಿಸುತ್ತಾರೆ. ಇದರಲ್ಲಿ ಉಪನಿಷತ್ತುಗಳ ಪ್ರಭಾವ ಎದ್ದುಕಾಣುತ್ತದೆ. ಇದಕ್ಕಿಂತ ಕೆಲವು ವರ್ಷ ಮೊದಲು 1904ರಲ್ಲಿ, ತಮ್ಮ 'ಸ್ವದೇಶಿ ಸಮಾಜ್' ಎಂಬ ಲೇಖನದಲ್ಲಿ ಟ್ಯಾಗೋರ್ ಅವರು ತಮ್ಮ ಸಾಮಾಜಿಕ ತತ್ವಚಿಂತನೆಯನ್ನು ನಿರೂಪಿಸುತ್ತಾರಲ್ಲದೆ, ಗ್ರಾಮೀಣ ಬದುಕು ಛಿದ್ರವಾಗುತ್ತಿರುವ ಬಗ್ಗೆ ಆತಂಕವನ್ನು ವ್ಯಕ್ತಪಡಿಸಿ,ಕಾರಣಗಳನ್ನು ವಿಶ್ಲೇಷಿಸುತ್ತಾರೆ. ಅಷ್ಟೇ ಅಲ್ಲದೆ, ಗ್ರಾಮೀಣ ಪುನರ್‌ನಿರ್ಮಾಣಕ್ಕಾಗಿ ಹಲವು ಸ್ಪಷ್ಟ ಸೂಚನೆಗಳನ್ನು ಕೂಡ ಕೊಡುತ್ತಾರೆ. ಆದರೆ 1911ರಿಂದ, ಅಂದರೆ ಅವರು 'ಅಚಲಾಯತನ್' ನಾಟಕ ಬರೆದ ಕಾಲದಿಂದ, ವೈದಿಕ ಧರ್ಮದ ಮತಾಚರಣೆಗಳ ಬಗೆಗಿನ ಅವರ ಧೋರಣೆಯಲ್ಲಿ ನಮಗೆ ಬದಲಾವಣೆ

ಕಾಣಸಿಗುತ್ತದೆ. ಈ ನಾಟಕದಲ್ಲಿ ಅವರು ಮೊಂಡ ಸಂಪ್ರದಾಯವಾದಿ ಸಮುದಾಯವು ಯಾವ ರೀತಿಯಾಗಿ ಧರ್ಮದ ನಿಜವಾದ ಅರ್ಥವನ್ನು ತಿಳಿದುಕೊಳ್ಳದೆ, ಅರ್ಥವಿಹೀನ ಮತಾಚರಣೆಗಳಲ್ಲಿ ತೊಡಗಿಕೊಂಡಿದೆ ಎಂಬುದನ್ನು ಕುರಿತು ಅಪಹಾಸ್ಯ ಮಾಡುತ್ತಾರೆ. ನಾಟಕದಲ್ಲಿ ತಾವು ತಳೆದಿರುವ ನಿಲುವು ಅಪಾರ್ಥಕ್ಕೆ ಗುರಿಯಾಗಬಾರದೆಂಬ ಉದ್ದೇಶದಿಂದ, ಲಲಿತ್ ಕುಮಾರ್ ಬಂದ್ಯೋಪಾಧ್ಯಾಯರು ಈ ನಾಟಕ ಕೊಡುವ ಸಂದೇಶದ ಕುರಿತಂತೆ ಮಾಡುವ ಟೀಕೆಗೆ ಪ್ರತಿಯಾಗಿ ತಮ್ಮ ನಿಲುವನ್ನು ಸ್ಪಷ್ಟಪಡಿಸುತ್ತಾ, 'ತಾನು ಮಂತ್ರಪಠಣ ಅಥವ ಮತಾಚಾರಣೆಗಳ ವಿರುದ್ಧ ಇದ್ದೇನೆ' ಎಂದು ತಿಳಿದುಕೊಳ್ಳಬಾರದು ಎಂದು ಹೇಳುತ್ತಾರೆ. "ಜ್ಞಾನದ ಅನ್ವೇಷಣೆ ಮತ್ತು ಬೌದ್ಧಿಕ ಪ್ರಯೋಗಗಳಿಗೆ ಅಡ್ಡಿಯುಂಟುಮಾಡುವ ಮತಾಚರಣೆಗಳು ಖಂಡಿತವಾಗಿಯೂ ನಿಂದನಾರ್ಹ. ಆದರೆ ಮನಸ್ಸಿನ ವಿಸ್ತಾರವನ್ನು ಹೆಚ್ಚಿಸುವಂಥ ಮತ್ತು ಜ್ಞಾನತೃಶೆಯನ್ನು ಜಾಗೃತಗೊಳಿಸುವಂತಹ ಮತಾಚರಣೆಗಳು ಖಂಡಿತವಾಗಿಯೂ ಸ್ತುತ್ಯಾರ್ಹ," ಎಂದು ಹೇಳುತ್ತಾರೆ.[34]. ಈ ಧೋರಣೆಯ ವಿಸ್ತರಣೆಯು ಅವರು 1916ರಲ್ಲಿ ಬರೆದ 'ಬಾಲಕ' ಕವನಸಂಕಲನದಲ್ಲಿ ಕಾಣಸಿಗುತ್ತದೆ. 'ಬಾಲಕ'ದಲ್ಲಿ ಅವರು ಯೌವನ ಮತ್ತು ಸಾಹಸವನ್ನು ಸಂಭ್ರಮಿಸುತ್ತಾರೆ; ರಾಷ್ಟ್ರೀಯತೆಯನ್ನು 'ಭೌಗೋಳಿಕಾ ಭೂತ' ಎಂದು ತಿರಸ್ಕರಿಸುತ್ತಾರಲ್ಲದೆ, ಸಾರ್ವತ್ರಿಕ ಆದರ್ಶವಾಗಿ ಮಾನವತೆಯನ್ನು ಎತ್ತಿಹಿಡಿಯುತ್ತಾರೆ. ಇದೇ ಹೊತ್ತಿಗೆ ಪಾಶ್ಚಾತ್ಯ ಸಂಸ್ಕೃತಿಯ ಸಣ್ಣತನವನ್ನು ಟೀಕಿಸಿ, ಉಪನಿಷತ್ತುಗಳ ಸತ್ವಸಾರಕ್ಕೆ ಬದ್ಧತೆಯನ್ನು ಸಾರುತ್ತಾರೆ.[35]

ಇದೇ ಹೊತ್ತಿಗೆ, ಅಂದರೆ 1920ರ ದಶಕದ ಮಧ್ಯಂತರದಲ್ಲಿ ಶ್ರೀನಿಕೇತನ ಪ್ರಯೋಗ ಜಾರಿಯಲ್ಲಿರುವ ಸಂದರ್ಭದಲ್ಲಿ ಅವರು ಎರಡು ಪ್ರಸಿದ್ಧ ನಾಟಕಗಳನ್ನು ಬರೆಯುತ್ತಾರೆ:.: 1922ರಲ್ಲಿ ಬರೆದ 'ಮುಕ್ತೋಧಾರಾ' ಮತ್ತು 1924ರಲ್ಲಿ ಬರೆದ 'ರಕ್ತೋಕರಬಿ'. ಈ ಎರಡೂ ನಾಟಕಗಳಲ್ಲಿ 'ಯಂತ್ರ ನಾಗರಿಕತೆ'ಯ ಬಗ್ಗೆ ಸಂದೇಹಿಸುವ ಅವರು, ಪ್ರಕೃತಿಯ ಮೇಲೆ ಯಂತ್ರನಾಗರಿಕತೆಯ ದಬ್ಬಾಳಿಕೆಯ ಕುರಿತಂತೆ ತಮ್ಮ ಕಳವಳವನ್ನು ಸಹ ವ್ಯಕ್ತಪಡಿಸುತ್ತಾರೆ. ಸ್ವಪ್ರಯೋಜನಕ್ಕೆ ಇತರರನ್ನು ದುಡಿಸಿಕೊಳ್ಳುವ ತಂತ್ರಜ್ಞ ಪ್ರಭುತ್ವದ ಬಗ್ಗೆ ಅವರಿಗಿದ್ದ ಪ್ರತಿರೋಧವು ಇಲ್ಲಿ ಸ್ಪಷ್ಟವಾಗುತ್ತದೆ. ಟ್ಯಾಗೋರರನ್ನು ಉದ್ಧರಿಸಲು ವಿದ್ವಾಂಸರು ಹೆಚ್ಚಾಗಿ ಆಯ್ದುಕೊಳ್ಳುವುದು ಈ ಎರಡು ನಾಟಕಗಳನ್ನು. ಟ್ಯಾಗೋರರು 1930ರ ದಶಕದಲ್ಲಿ ರಷ್ಯಾಕ್ಕೆ ತೆರಳಿದ ಸಂದರ್ಭದಲ್ಲಿ ಎರಡು ಲೇಖನಗಳನ್ನು ಬರೆಯುತ್ತಾರೆ: 1933ರಲ್ಲಿ ಬರೆದ 'ಶಿಕ್ಷರ್ ಬಿಕಿರಣ್' ಮತ್ತು 1936ರಲ್ಲಿ ಬರೆದ 'ಶಿಕ್ಷರ್ ಸ್ವಂಗೀಕರಣ್'. ಈ ಎರಡು ಲೇಖನಗಳು ನಂತರದಲ್ಲಿ ಬಹುಚರ್ಚಿತವಾಗುತ್ತವೆ. ಈ ಲೇಖನಗಳಲ್ಲಿ ಟ್ಯಾಗೋರರು ಕೆಲವರ್ಷಗಳ ಹಿಂದೆ ತಾವು ಪ್ರತಿಪಾದಿಸಿದ ವಿಚಾರಗಳನ್ನು ಮತ್ತೆ ಮರುಪರಿಶೀಲಿಸಿ, ಸರಿಕಾಣದ ವಿಚಾರಗಳನ್ನು ಹಿಂತೆಗೆದುಕೊಳ್ಳುತ್ತಾರೆ. ಟ್ಯಾಗೋರರು 1941ರಲ್ಲಿ ಬರೆದ 'ಆಶ್ರಮೆರ್ ಶಿಕ್ಷಾ' ಮತ್ತು ಅವರ ಹಿಂದಿನ ಪ್ರಸಿದ್ಧ ಲೇಖನ 'ತಪೋಬನ'ದಲ್ಲಿ ಚರ್ಚಿಸಿದ ವಿಚಾರಗಳ ನಡುವೆ ಹೇಗೆ ಯಾವುದೇ ವ್ಯತ್ಯಾಸ ಕಾಣಿಸುವುದಿಲ್ಲವೋ ಹಾಗೆಯೇ ಅವರ ಎಲ್ಲಕ್ಕಿಂತ ಮೊದಲ ಲೇಖನ 'ಶಿಕ್ಷರ್ ಹರ್ ಫರ್' ಮತ್ತು ಈ ಎರಡು ಲೇಖನಗಳ ನಡುವೆ ಕೂಡ ನಮಗೆ ಯಾವುದೇ ಮೂಲಭೂತ ವ್ಯತ್ಯಾಸ ಕಾಣಸಿಗುವುದಿಲ್ಲ. ವಿಶ್ವಭಾರತಿಯ ಮಾಜಿ ಉಪಾಚಾರ್ಯರೊಬ್ಬರು ಹೇಳುವಂತೆ, 'ಶಿಕ್ಷಣದ ಬಗ್ಗೆ ಟ್ಯಾಗೋರರ ತಾತ್ವಿಕ ಪರಿಕಲ್ಪನೆಯಲ್ಲಿ ನಮಗೆ ಕಾಲದಿಂದ ಕಾಲಕ್ಕೆ ಯಾವುದೇ ಪಲ್ಲಟ ಕಾಣುವುದಿಲ್ಲ.'[37] ಆದರೆ ಶಿಕ್ಷಣದ ಬಗ್ಗೆ ಅವರ ವಿಚಾರಗಳು ಬೆಳೆಯುತ್ತಾ ಹೋದಂತೆ, ಸಂದರ್ಭದ ಅಗತ್ಯಕ್ಕನುಸಾರವಾಗಿ ಅವರ ಗಮನ ಒಂದು ವಿಷಯದಿಂದ ಇನ್ನೊಂದು ವಿಷಯದ ಕಡೆಗೆ ಬದಲಾಗಿರಬಹುದು ಎಂಬುದು ನಿಜ.

## VI

ವಿಶ್ವ-ಭಾರತಿಯು 1947ರಲ್ಲಿ ಪ್ರಕಟಿಸಿದ ವಿಶೇಷ ತ್ರೈಮಾಸಿಕ ಸಂಚಿಕೆಯಲ್ಲಿ ಟ್ಯಾಗೋರ್ ಮತ್ತು ಗಾಂಧಿಯವರ ಶೈಕ್ಷಣಿಕ ಪರಿಕಲ್ಪನೆಗಳು ಮತ್ತು ಪ್ರಯೋಗಗಳ ಬಗ್ಗೆ

ಅನಂತನಾಥ ಬಸು ಮತ್ತು ಸುನಿಲ್‌ಚಂದ್ರ ಸರ್ಕಾರ್ ಬರೆದ ಎರಡು ತುಲನಾತ್ಮಕ ಲೇಖನಗಳಿವೆ. ವಿಷಯಕ್ಕೆ ಸಂಬಂಧಿಸಿದಂತೆ ತುಂಬ ಹೊಳಹಿನಿಂದ ಕೂಡಿದ್ದರೂ, ಈ ಎರಡು ಲೇಖನಗಳು ಗಾಂಧಿ ಮತ್ತು ಟ್ಯಾಗೋರರ ಶೈಕ್ಷಣಿಕ ದೃಷ್ಟಿಕೋನದಲ್ಲಿನ ವ್ಯತ್ಯಾಸಗಳನ್ನು ಅಷ್ಟಾಗಿ ಗಣನೆಗೆ ತೆಗೆದುಕೊಂಡಿಲ್ಲವೆಂದೇ ಹೇಳಬೇಕಾಗುತ್ತದೆ. ಸರ್ಕಾರ್ ಅವರು ಬರೆಯುತ್ತಾರೆ, “ಈ ಎರಡು ವ್ಯವಸ್ಥೆಗಳನ್ನು ಹೋಲಿಸಿ ನೋಡಿದಾಗ ಅವುಗಳ ನಡುವಿನ ಸಂಬಂಧ ನಮಗೆ ಒಂದು ರಕ್ತಸಂಬಂಧದಂತೆ ಕಂಡುಬರುತ್ತದೆ. ವ್ಯತ್ಯಾಸ ಏನಾದರೂ ಇದೆ ಎಂದರೂ, ಅದು ರಾಜಿಮಾಡಲಾಗದಂತಹ ವ್ಯತ್ಯಾಸವಾಗಿ ಕಂಡುಬರುವುದಿಲ್ಲ...”[38] ಬಸು ಅವರು ಗಾಂಧಿ ಮತ್ತು ಟ್ಯಾಗೋರರ ನಡುವಿನ ಪ್ರಮುಖ ಭಿನ್ನಾಭಿಪ್ರಾಯಗಳನ್ನು ಈ ರೀತಿಯಾಗಿ ಸರಿತೂಗಿಸಲು ಪ್ರಯತ್ನಿಸುತ್ತಾರೆ. “ಶಾಲಾ ಚಟುವಟಿಕೆಗೆ ಸಂಬಂಧಿಸಿದಂತೆ ಕೂಡ ಅವರಿಬ್ಬರ ತಾತ್ವಿಕ ನೆಲೆಗಟ್ಟು ಒಂದೇ ಆಗಿದೆ; ಆದರೆ ಮೂಲಶಿಕ್ಷಣದಲ್ಲಿ ಮಾಡಿದಂತೆ ಟ್ಯಾಗೋರರು ಚಟುವಟಿಕೆಯ ಪರಿಕಲ್ಪನೆಯನ್ನು ವಿವರಿಸಿ, ಅದರ ಸುತ್ತ ಒಂದು ವ್ಯವಸ್ಥಿತ ಪಠ್ಯಕ್ರಮವನ್ನು ಅಭಿವೃದ್ಧಿಪಡಿಸುವುದಿಲ್ಲ... ಬಹುಶಃ ಟ್ಯಾಗೋರರು ಶೈಕ್ಷಣಿಕ ಪಠ್ಯಕ್ರಮ ಸಿದ್ಧಾಂತದ ಬದಲಾಗಿ ಶಿಕ್ಷಣ ತತ್ವಜ್ಞಾನವನ್ನು ಅನ್ವೇಶಿಸುತ್ತಿದ್ದುದು ಇದಕ್ಕೆ ಕಾರಣವಿರಬಹುದು.”[39] ಈ ವಾದ ಕಿಂಚಿತ್ತೂ ತೃಪ್ತಿದಾಯಕವೆನಿಸುವುದಿಲ್ಲ. ಗಾಂಧಿಯವರಿಗೆ ಚಟುವಟಿಕೆಯು ಕೇವಲ ಒಂದು ತತ್ವ ಅಥವ ಅದನ್ನು ಆಧರಿಸಿದ ಪಠ್ಯಕ್ರಮ ರಚನೆಯ ಪ್ರಶ್ನೆ ಮಾತ್ರವಾಗಿರಲಿಲ್ಲ. ಚಟುವಟಿಕೆ ಅನ್ನುವುದು ಗಾಂಧಿಯವರಿಗೆ ಅದಕ್ಕಿಂತ ಇನ್ನೂ ಹೆಚ್ಚಿನದೇನೋ ಆಗಿತ್ತು. ಸ್ವಯಂಪೂರ್ಣತೆಯ ತತ್ವದ ಆಧಾರದ ಮೇಲೆ ಗಾಂಧಿಯವರು ಲಾಭದಾಯಕ ಉತ್ಪಾದನಾ ಕೆಲಸದಲ್ಲಿ ತೊಡಗಿಸಿಕೊಳ್ಳುವ ಮೂಲಕ ಶಿಕ್ಷಣವನ್ನು ಸಾಧ್ಯವಾಗಿಸಬೇಕು ಎಂಬ ಉದ್ದೇಶವನ್ನು ಹೊಂದಿದ್ದರು. ಗಾಂಧಿಯವರ ಪ್ರಕಾರ, ಶಾಲಾ ವಸ್ತುಸಂಗ್ರಹಾಲಯಕ್ಕೆ ವಸ್ತುಗಳನ್ನು ತಯಾರಿಸುವುದು ಅಥವ ಯಾವುದೇ ಮೌಲ್ಯವಿಲ್ಲದ ಆಟಿಕೆಗಳನ್ನು ತಯಾರಿಸುವುದು ದೈಹಿಕ ತರಬೇತಿಯ ಉದ್ದೇಶ ಆಗಿರಲಿಲ್ಲ. ಅವರ ಉದ್ದೇಶ, ಮಾರಾಟಕ್ಕೆ ಯೋಗ್ಯವಾದ ವಸ್ತುಗಳನ್ನು ತಯಾರಿಸುವುದಾಗಿತ್ತು. ಕಾರ್ಖಾನೆಗಳಲ್ಲಿ ಹಿಂದೆ ಮಾಡುತ್ತಿದ್ದಂತೆ ಚಾಟಿಯೇಟಿನ ಭಯದಲ್ಲಿ ಕೆಲಸ ಮಾಡದೆ, ಸಂತೋಷದಿಂದ, ಬುದ್ಧಿ ಉಪಯೋಗಿಸಿ ಕೆಲಸ ಮಾಡಲು ಅವಕಾಶ ಕೊಡುವುದಾಗಿತ್ತು.[40] ಗಾಂಧಿಯವರಿಗೆ ಮೂಲಶಿಕ್ಷಣವು ಅವರ ರಾಜಕೀಯ ಯೋಜನೆಯ ಒಂದು ಭಾಗವಾಗಿತ್ತು. ಅವರ ಪ್ರಕಾರ ಪ್ರಸ್ತುತದಲ್ಲಿದ್ದ ಶಿಕ್ಷಣ ವಿಧಾನವು ಮೂರು ಪ್ರಮುಖ ವಿಚಾರಗಳಲ್ಲಿ ದೋಷಯುಕ್ತವಾಗಿತ್ತು. ಮೊದಲನೆಯದಾಗಿ, ಅದನ್ನು ಸ್ಥಳೀಯ ಸಂಸ್ಕöÈತಿಗೆ ಸಂಪೂರ್ಣ ಪರಕೀಯವಾಗಿ ವಿದೇಶಿ ಸಂಸ್ಕöÈತಿಯ ನೆಲೆಗಟ್ಟಿನ ಮೇಲೆ ಕಟ್ಟಲಾಗಿತ್ತು. ಎರಡನೆಯದಾಗಿ, ಅದು ಕೈ ಮತ್ತು ಹೃದಯದ ಸಂಸ್ಕೃತಿಯನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿ, ಕೇವಲ ಬುದ್ಧಿಗೆ ಮಾತ್ರ ಸೀಮಿತವಾಗಿತ್ತು ಮತ್ತು ಮೂರನೆಯದಾಗಿ, ನೈಜ ಶಿಕ್ಷಣವನ್ನು ಪರಕೀಯ ಭಾಷಾಮಾಧ್ಯಮದ ಮೂಲಕ ಪಡೆಯುವುದು ಅಸಂಭವವಾಗಿತ್ತು.[41] ಗಾಂಧಿಯವರು 1921ರಲ್ಲಿ ತಮ್ಮ ‘ಯಂಗ್ ಇಂಡಿಯಾ’ ಪತ್ರಿಕೆಯಲ್ಲಿ, ತಾವು ಬಯಸುವ ಶಿಕ್ಷಣ ವ್ಯವಸ್ಥೆಯ ಮೂರು ಉದ್ದೇಶಗಳನ್ನು ವಿವರಿಸುತ್ತಾರೆ: “ಒಂದನೆಯದಾಗಿ, ಶಿಕ್ಷಣದಲ್ಲಿ ಸ್ವಾವಲಂಬನೆ, ಎರಡನೆಯದಾಗಿ, ಮಕ್ಕಳ ದೇಹವನ್ನು ತರಬೇತುಗೊಳಿಸುವ ಜೊತೆಗೆ ಅವರ ಮನಸ್ಸನ್ನು ಕೂಡ ತರಬೇತುಗೊಳಿಸುವುದು ಮತ್ತು ಮೂರನೆಯದಾಗಿ, ವಿದೇಶಿ ನೂಲು ಮತ್ತು ಬಟ್ಟೆಯ ಸಂಪೂರ್ಣ ಬಹಿಷ್ಕಾರಕ್ಕೆ ದಾರಿ ಸನ್ನದ್ಧಗೊಳಿಸುವುದು. ಹೀಗೆ ತರಬೇತು ಹೊಂದಿದ ಮಕ್ಕಳು ಸ್ವಾವಲಂಬಿಗಳು ಮತ್ತು ಸ್ವತಂತ್ರರು ಆಗಿರುತ್ತಾರೆ,”[42] ಎಂದು ಅವರು ಬರೆಯುತ್ತಾರೆ.[42] ಮುಂದುವರಿಸಿ ಹೀಗೆ ಹೇಳುತ್ತಾರೆ: “ಇಂತಹ ಶಾಲೆಗಳಲ್ಲಿ ಹುಡುಗರಿಗೆ ಆಟ ಎಂದರೆ ಹೊಲ ಊಳುವುದು. ನಮ್ಮ ಹುಡುಗರು ಮತ್ತು ಯುವಕರು ಕಾಲ್ಚೆಂಡು, ಕ್ರಿಕೆಟ್ ಮತ್ತು ಇಂತಹ ಇನ್ನಿತರ ಆಟಗಳನ್ನು ಆಡಲಿಲ್ಲವೆಂದರೆ ಅವರ ಜೀವನ ನಿಸ್ಸಾರವಾಗಿರುತ್ತದೆ ಎಂಬ ಯೋಚನೆಯೇ ಸಂಪೂರ್ಣ ತಪ್ಪು.”[43] “ಹಿಂಜುವಿಕೆ ಮತ್ತು ನೇಯುವಿಕೆಯಂತಹ ಗ್ರಾಮೀಣ ಕೈಕೆಲಸಗಳ ಮೂಲಕ ಮೂಲಶಿಕ್ಷಣವನ್ನು ಸಾಧ್ಯವಾಗಿಸುವ ನನ್ನ ಯೋಜನೆಯನ್ನು,

ಅತ್ಯಂತ ವ್ಯಾಪಕ ಪರಿಣಾಮಗಳನ್ನುಳ್ಳ ಮೌನ ಸಾಮಾಜಿಕ ಕ್ರಾಂತಿಯ ಮುಖ್ಯ ಭೂಮಿಕೆಯೆಂಬುದಾಗಿ ಗ್ರಹಿಸಲಾಗಿದೆ"[44] ಎಂದು ಅವರು ಬರೆಯುತ್ತಾರೆ. ಆದರೆ ಟ್ಯಾಗೋರ್ ಅವರಿಗೆ ಗಾಂಧಿಯವರು ಸ್ವಾವಲಂಬನೆಯನ್ನು ಶಾಲಾ ವ್ಯವಸ್ಥೆಯ ಮೂಲಮಂತ್ರವಾಗಿಸಿದ್ದು ಸರಿಕಾಣುವುದಿಲ್ಲ. ಡಿಸೆಂಬರ್ 29, 1937ರಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯದ ಸೆನೆಟ್ ಹೌಸ್‌ನಲ್ಲಿ ನಡೆದ 'ನ್ಯೂ ಎಜುಕೇಶನ್ ಫೆಲೋಶಿಪ್ ಸಭೆ'ಗೆ ಬರೆದ ಲಿಖಿತ ಸಂದೇಶದಲ್ಲಿ ಗಾಂಧಿಯವರ ಈ ನಿಲುವನ್ನು ತಿರಸ್ಕರಿಸುತ್ತಾರೆ. ಗಾಂಧಿಯವರ ಮೂಲಶಿಕ್ಷಣ ಯೋಜನೆಯು ಟ್ಯಾಗೋರ್ ಅವರಿಗೆ ವ್ಯಕ್ತಿಯ ಬೆಳವಣಿಗೆಯನ್ನು ಪ್ರೋತ್ಸಾಹಿಸುವುದರ ಬದಲಾಗಿ ಕೇವಲ ಭೌತಿಕ ಅಗತ್ಯಗಳನ್ನು ಪೂರೈಸುವುದರ ಕಡೆಗೆ ಹೆಚ್ಚಿನ ಗಮನಕೊಟ್ಟಂತೆ ಕಾಣಿಸುತ್ತದೆ. ಆಟೋಟಗಳ ಬದಲಿಗೆ ವಿದ್ಯಾರ್ಥಿಗಳನ್ನು ಉತ್ಪಾದನಾ ಕೆಲಸಕ್ಕೆ ಹಚ್ಚುವ, ಮತ್ತು ಅವರ ಪರಿಶ್ರಮದ ಮೂಲಕ ಒದಗಿದ ಲಾಭದಲ್ಲಿ ಶಿಕ್ಷಕರಿಗೂ ಒಂದು ಪಾಲನ್ನು ಕೊಡಮಾಡುವ ವ್ಯವಸ್ಥೆಯನ್ನು ಬೆಂಬಲಿಸಲು ಅವರು ಒಪ್ಪುವುದಿಲ್ಲ.[45] ಬದುಕು ಮತ್ತು ಕೆಲಸದ ಕುರಿತು ಟ್ಯಾಗೋರ್ ಮತ್ತು ಗಾಂಧಿಯವರ ಧೋರಣೆಯಲ್ಲಿನ ಮೂಲಭೂತ ವ್ಯತ್ಯಾಸವನ್ನು ನಾವಿಲ್ಲಿ ಗಮನಿಸಬಹುದು. ಈ ಕುರಿತಂತೆ ವಾರ್ಧಾ ಸಮ್ಮೇಳನದ ಸಂವಾದದಲ್ಲಿ ಜಾಕೀರ್ ಹುಸೇನ್ ಅವರು ವ್ಯಕ್ತಪಡಿಸಿದ ಅಂಜಿಕೆಯು ಬಹಳ ಕುತೂಹಲಕಾರಿಯಾಗಿದ್ದು, ಅದು ಹೀಗಿದೆ: "ಇದರ ಪರಿಣಾಮವಾಗಿ ಶಿಕ್ಷಕರು ಗುಲಾಮರ ಮೇಸ್ತ್ರಿಗಳ ರೀತಿಯಲ್ಲಿ ಮಕ್ಕಳ ಪರಿಶ್ರಮವನ್ನು ದುರುಪಯೋಗಪಡಿಸಿಕೊಳ್ಳಬಹುದು. ಹೀಗಾದರೆ ಚರಕವು ಪುಸ್ತಕಗಳಿಗಿಂತಲೂ ಹೆಚ್ಚಿನ ಅಪಾಯ ಉಂಟುಮಾಡಬಹುದು. ಅಷ್ಟೇ ಅಲ್ಲದೆ ಈ ವ್ಯವಸ್ಥೆಯಿಂದ ನಮ್ಮ ದೇಶದಲ್ಲಿ ಒಂದು ಗುಪ್ತ ಗುಲಾಮಗಿರಿ ಪದ್ಧತಿಗೆ ಬುನಾದಿ ಹಾಕಿದಂತಾಗುತ್ತದೆ."[46] ಕೆ.ಟಿ.ಶಾ ಅವರೂ ಸಹ, "...ಈಗಿರುವ ಕಂಠಪಾಠದ ಅನಿಷ್ಟದ ಬದಲಾಗಿ ವಿದ್ಯಾರ್ಥಿಗಳನ್ನು ಶೋಷಿಸುವ, ಅವರನ್ನು ಮಿತಿಮೀರಿ ದುಡಿಸಿಕೊಳ್ಳುವ ಅನಿಷ್ಟ ವ್ಯವಸ್ಥೆಯೊಂದು ಸದ್ದಿಲ್ಲದೆ ಆದರೆ ಖಂಡಿತವಾಗಿ ಒಳನುಸುಳಲಿದ್ದು, ಇದರ ನಡುವೆ ಶಿಕ್ಷಣದ ನಿಜವಾದ ಉದ್ದೇಶವು ತೆರೆಮರೆಗೆ ಸರಿಯಲಿದೆ.[47] ಎನ್ನುತ್ತಾರೆ. ಇವರಿಬ್ಬರು ಕೂಡ ನಮ್ಮ ಆರ್ಥಿಕ ವ್ಯವಸ್ಥೆಯಲ್ಲಿ ಅಭಿವೃದ್ಧಿಯ ಪಥ ಹೇಗೆ ಸಾಗಬೇಕು ಎಂಬ ಬಗ್ಗೆ ಗಾಂಧಿಯವರ ನಿಲುವಿಗಿಂತ ಭಿನ್ನವಾದ ನಿಲುವನ್ನು ತಳೆದಿದ್ದರು. ಶಾ ಬರೆಯುತ್ತಾರೆ, "ದೈಹಿಕ ಶ್ರಮದ ಮಹತ್ವವನ್ನು ಎತ್ತಿಹಿಡಿಯುವುದರಲ್ಲಿ ತಪ್ಪೇನಿಲ್ಲ ಆದರೆ ನಾವು ಯಂತ್ರಯುಗದಲ್ಲಿ ಬದುಕುತ್ತಿದ್ದೇವೆ ಎಂಬುದನ್ನು ಮರೆಯಬಾರದು. ಹಾಗಾಗಿ ನೀವು ಕೈಕೆಲಸದ ಮೇಲೆ ಹೆಚ್ಚಿನ ಗಮನಕೊಟ್ಟು ಯಂತ್ರಗಳನ್ನು ನಿರ್ಲಕ್ಷಿಸಿದಲ್ಲಿ ಅದು ದೇಶದ ಆರ್ಥಿಕ ಯೋಗಕ್ಷೇಮಕ್ಕೆ ಹಾನಿಕಾರಕವಾಗುತ್ತದೆ."[48] "ಯಂತ್ರಗಳು ನಿಜವಾಗಿಯೂ ಅನಿವಾರ್ಯ ಎಂದು ನಿಮಗನಿಸುವುದಾದರೆ ನೀವು ನನ್ನ ಯೋಜನೆಯನ್ನು ತಿರಸ್ಕರಿಸತಕ್ಕದ್ದು ಮತ್ತು ಅದಕ್ಕೆ ಪರ್ಯಾಯವಾಗಿ ಹೊಸತೊಂದು ಯೋಜನೆಯೊಂದನ್ನು ಸೂಚಿಸತಕ್ಕದ್ದು," ಎಂಬ ಗಾಂಧಿಯವರ ಎಚ್ಚರಿಕೆಯ ಹೊರತಾಗಿಯೂ ವಾರ್ಧಾ ಸಮಿತಿ ವರದಿಯು ಗಾಂಧಿಯವರ ಸ್ವಾವಲಂಬಿ ಶಿಕ್ಷಣದ ಕುರಿತಾಗಿನ ನಿಲುವನ್ನು ದುರ್ಬಲಗೊಳಿಸಿದ್ದರಲ್ಲಿ ಆಶ್ಚರ್ಯವಿಲ್ಲ.

## VII

ಗಾಂಧಿಯವರ ಯೋಜನೆಯನ್ನು ಅರ್ಥಮಾಡಿಕೊಳ್ಳಬೇಕೆಂದರೆ ಸ್ವಾವಲಂಬಿ ಶಿಕ್ಷಣದ ಪರಿಕಲ್ಪನೆಯನ್ನು ನಾವು ಅರ್ಥಮಾಡಿಕೊಳ್ಳುವುದು ಅಗತ್ಯ. ಭಾರತದ ಎಲ್ಲಾ ನಾಯಕರ ಪೈಕಿ ಬಹುಶಃ ಗಾಂಧಿಯವರೊಬ್ಬರೆ ಶಿಕ್ಷಣವನ್ನು ನಮ್ಮ ದೇಶದ ಶ್ರಮಿಕ ಜನರ ದೃಷ್ಟಿಯಿಂದ ನೋಡುವ ಪ್ರಯತ್ನ ಮಾಡಿದವರು. ಗಾಂಧಿ ಮತ್ತು ಇತರ ನಾಯಕರ ನಡುವಿನ ವ್ಯತ್ಯಾಸ ಇರುವುದು ಕೂಡ ಇಲ್ಲಿಯೇ. 'ಶ್ರಮಿಕ ಕುಟುಂಬಗಳಿಗೆ ಸೇರಿದ ಮಕ್ಕಳು ಸ್ವಇಚ್ಛೆಯಿಂದ ತಮ್ಮ ಕುಟುಂಬದ ಅಗತ್ಯಗಳನ್ನು ಸರಿತೂಗಿಸಲು ದುಡಿಮೆಯಲ್ಲಿ ತೊಡಗಿ ಹೆತ್ತವರಿಗೆ ಸಹಾಯ ಮಾಡುತ್ತಾರೆ. ಕೆಲಸ ಇಲ್ಲ ಎಂದರೆ ಊಟ ಇಲ್ಲ ಎಂದು ಶ್ರಮಿಕ ವರ್ಗದ ಮಕ್ಕಳಿಗೆ ಗೊತ್ತಿರುತ್ತದೆ,' ಎಂಬುದು ಗಾಂಧಿಯವರ ನಂಬಿಕೆಯಾಗಿತ್ತು.[50]

ಗಾಂಧಿಯವರು ಪ್ರತಿಪಾದಿಸಿದ 'ಲಾಭದಾಯಕ ಉತ್ಪಾದನಾ ಕೆಲಸ'ದ ಪರಿಕಲ್ಪನೆಯನ್ನು ಸಾರ್ವತ್ರಿಕವಾಗಿ ಜಾರಿಗೊಳಿಸಿದ್ದಲ್ಲಿ ಕೃಷಿಯಾಧಾರಿತ ಸಮುದಾಯಗಳಲ್ಲಿ ಬಾಲಕಾರ್ಮಿಕ ಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲಗೊಳಿಸಬಹುದಿತ್ತು. ಉತ್ಪಾದನೆಯ ಸಂಬಂಧಗಳಲ್ಲಿ ಕೃಷಿಕಾರ್ಮಿಕರ ಸ್ಥಾನವನ್ನು ಸುಭದ್ರಗೊಳಿಸುವುದಲ್ಲದೆ, ಭೂಮಾಲಿಕರೊಂದಿಗಿನ ಸಂಘರ್ಷದ ಸಂದರ್ಭದಲ್ಲಿ ಕಾರ್ಮಿಕ ವರ್ಗಕ್ಕೆ ಇದು ಒಂದು ಪರ್ಯಾಯ ಆರ್ಥಿಕ ಆಧಾರ ವ್ಯವಸ್ಥೆಯನ್ನು ಒದಗಿಸುವ ಸಾಮರ್ಥ್ಯವನ್ನು ಹೊಂದಿದ್ದಿತು ಆದರೆ ಗಾಂಧಿಯವರು ತಮ್ಮ ಶಿಕ್ಷಣ ಯೋಜನೆಯಲ್ಲಿ ಅಡಕವಾಗಿದ್ದ ಈ ಅಂಶವನ್ನು ವ್ಯಕ್ತಪಡಿಸಲಿಲ್ಲ. ಬಹುಶಃ ಅವರು ನಂಬಿದ ಅಹಿಂಸೆಯ ತತ್ವವು, ವರ್ಗಸಂಘರ್ಷವನ್ನು ತೀಕ್ಷ್ಣಗೊಳಿಸಲು ಅವಕಾಶವೀಯಲಿಲ್ಲ. ಸ್ವಾವಲಂಬಿ ಶಿಕ್ಷಣ ಪಡೆದುಕೊಂಡ ಮಕ್ಕಳು ಮುಂದಕ್ಕೂ ಸ್ವಾವಲಂಬಿಗಳೂ, ಸ್ವತಂತ್ರರೂ ಆಗಿರುತ್ತಾರೆ ಎಂದು ಗಾಂಧಿಯವರು ಹೇಳುತ್ತಾರೆ. ಇದು ಶಾಲೆ ಮತ್ತು ಮನೆಯ ನಡುವಿನ ಸಂಬಂಧವನ್ನು ಮುಂದುವರಿಸಿಕೊಂಡು ಹೋಗುವುದಾಗಿತ್ತು.[51]

ಇದೆಲ್ಲದರ ಜೊತೆಗೆ, ಯಂತ್ರ ನಾಗರಿಕತೆಯ ಬಗ್ಗೆ ಗಾಂಧಿಯವರಿಗಿದ್ದ ವಿರೋಧವನ್ನು ಅರ್ಥೈಸಿಕೊಳ್ಳಬಹುದಾದರೂ ಅದು ಕಾರ್ಯಸಾಧುವಾಗಿರಲಿಲ್ಲ. ಗಾಂಧಿಯವರಿಗೆ ಇದರ ಅರಿವಿತ್ತೆಂಬುದು ಅವರ ಇತರ ಬರವಣಿಗೆಗಳಲ್ಲಿ ಕಂಡುಬರುತ್ತದೆ. ಯಂತ್ರಗಳನ್ನು ಮಿತವಾಗಿ ಬಳಸುವ ಬಗ್ಗೆ ಅವರಿಗೆ ಅಭ್ಯಂತರವಿರಲಿಲ್ಲ; ಯಂತ್ರಗಳಿಗೆ ಸಂಪೂರ್ಣವಾಗಿ ಅಡಿಯಾಳಾಗದಂತೆ; ಅಥವ ಉತ್ಪಾದನೆಯಲ್ಲಿ ಮನುಷ್ಯನ ಸ್ಥಾನವನ್ನು ಸಂಪೂರ್ಣವಾಗಿ ಆಕ್ರಮಿಸದ, ಆದರೆ ದೈಹಿಕ ಶ್ರಮದ ಉತ್ಪಾದನೆಯ ಮಟ್ಟವನ್ನು ಹೆಚ್ಚಿಸಬಲ್ಲಂತಹ, ಹೊಲಿಗೆ ಯಂತ್ರದಂತಹ ಯಂತ್ರಗಳ ಬಗ್ಗೆ ಗಾಂಧಿಯವರಿಗೆ ತಕರಾರು ಇರಲಿಲ್ಲ. ಅವರ ವಿರೋಧ ಇದ್ದದ್ದು, ಮಾನವ ಶ್ರಮ ಮತ್ತು ನೈಸರ್ಗಿಕ ಶಕ್ತಿಗಳ ಮೇಲಿನ ಯಂತ್ರಗಳ ಪ್ರಾಬಲ್ಯದ ಬಗ್ಗೆ. ಟ್ಯಾಗೋರ್ ಅವರಿಗೆ ಯಂತ್ರ ನಾಗರಿಕತೆಯ ಬಗ್ಗೆ ಇದ್ದ ವಿರೋಧ ಅವರ 'ಮುಕ್ತೋಧಾರಾ' ಮತ್ತು ರಕ್ತಕರಬಿ' ನಾಟಕಗಳಲ್ಲಿ ನಮಗೆ ಕಾಣಸಿಗುತ್ತದೆ. ತಾತ್ವಿಕವಾಗಿ ಇವರಿಬ್ಬರೂ ಯಂತ್ರ ನಾಗರಿಕತೆಯನ್ನು ಮತ್ತು ಅದರ ಶೋಷಣೆಯ ಪ್ರವೃತ್ತಿ ಮತ್ತು ಗ್ರಾಹಕ ಕೇಂದ್ರಿತಮನೋಧರ್ಮವನ್ನು ಖಂಡಿಸುತ್ತಿದ್ದರು. ಆದರೆ ಟ್ಯಾಗೋರ್ ಅವರು ಸಮಯ ಸಂದರ್ಭದ ಅಗತ್ಯತೆಗೆ ಹೆಚ್ಚು ಪತ್ರಿಕ್ರಿಯಾಶೀಲರಾಗಿದ್ದು, ಸೀಮಿತ ಮಟ್ಟದಲ್ಲಿ ಆಧುನಿಕತೆಯನ್ನು ಒಪ್ಪಿಕೊಳ್ಳುತ್ತಾರೆ. ಎಷ್ಟೆಂದರೂ ಅವರು ಕವಿ. ರಾಜಕೀಯ ತತ್ವಜ್ಞಾನ ಅವರ ಪರಿಣತಿಯ ಕ್ಷೇತ್ರವಾಗಿರಲಿಲ್ಲ. ಆದರೆ ಗಾಂಧಿಯವರು ಆರ್ಥಿಕಮತ್ತು ಸಾಂಸ್ಕೃತಿಕ ಬಲವರ್ಧನೆಯ ವಸಾಹತುಶಾಹಿ ರಾಜಕೀಯಕ್ಕೆ ಪ್ರತಿಯಾಗಿ ದೈಹಿಕ ಶ್ರಮದ ನೈತಿಕ ನೆಲೆಗಟ್ಟಿನ ಮೇಲೆ ತಮ್ಮ ರಾಜಕೀಯ ತತ್ವಶಾಸ್ತ್ರವನ್ನು ಬೆಳೆಸುವವರಿದ್ದರು. ಅವರಿಗೆ ಶ್ರಮಿಕ ಜನರ ಮನಸನ್ನು ಅವರ ನೆಲೆಯಲ್ಲಿಯೇ ಅರ್ಥಮಾಡಿಕೊಳ್ಳುವ ಒಂದು ವಿಲಕ್ಷಣ ಸಂವೇದನಾಶೀಲತೆಯಿತ್ತು. ಅವರು ತಮ್ಮ ರಾಜಕೀಯ ತತ್ವಶಾಸ್ತ್ರವು, ಕೃಷಿ ಸಮುದಾಯದ ಶ್ರಮಜೀವಿಗಳ ಅವಶ್ಯಕತೆ ಮತ್ತು ಆಶೋತ್ತರಗಳಿಗೆ ಪ್ರತಿಶೃತಿಯಾಗಿರಬೇಕೆಂದು ಬಯಸಿದ್ದರು. ದೈಹಿಕ ಶ್ರಮದ ಬಗ್ಗೆ ಅವರು ಕೊಡುತ್ತಿದ್ದ ಹೆಚ್ಚಿನ ಒತ್ತು ಸಾಕಷ್ಟು ಮಹತ್ವಪೂರ್ಣವೆನಿಸಿತ್ತು. ಏಕೆಂದರೆ ಶ್ರಮವೊಂದೆ ಕಾರ್ಮಿಕ ವರ್ಗದ ಏಕೈಕ ಬಂಡವಾಳ. ತಮ್ಮ ಹಿತಾಸಕ್ತಿಗಳನ್ನು ಮುಂದುವರಿಸುವುದಕ್ಕಾಗಿ ಬೃಹತ್ ಕೈಗಾರಿಕೆಗಳು ಕಾರ್ಮಿಕ ವರ್ಗದ ಶ್ರಮವನ್ನು ಬಳಸಿಕೊಳ್ಳುತ್ತವೆ. ಶ್ರಮವನ್ನು ಒಂದು ಸರಕಿನ ಸ್ಥಿತಿಗೆ ಇಳಿಸುವ ಮೂಲಕ ಅದನ್ನು ಅಮಾನವೀಯಗೊಳಿಸಲಾಗಿದೆ. ಆಧುನಿಕ ಯಂತ್ರನಾಗರಿಕತೆಯು ಅನೈತಿಕವಾಗಿದ್ದು, ಅದು ಅಂತಿಮವಾಗಿ ನಮ್ಮನ್ನು ಸರ್ವನಾಶಕ್ಕೆಳೆಸುತ್ತದೆಂಬುದು ಗಾಂಧಿಯವರ ಅಲೋಚನೆಯಾಗಿತ್ತು.

ಗಾಂಧಿಯವರ ಈ ಅಭಿಪ್ರಾಯವನ್ನು ಎಲ್ಲರೂ ಒಪ್ಪಲಾರರು ನಿಜ, ಆದರೆ ಕೈಗಾರಿಕವಾಗಿ ಮುಂದುವರಿದಿರುವ ರಾಷ್ಟ್ರಗಳಲ್ಲಿ ಕಾಣುವ ಮಾನವ ಮೌಲ್ಯಗಳ

ಅಧಃಪತನ ಮತ್ತು ಸಾಂಸ್ಕೃತಿಕ ಅವನತಿಯನ್ನು ಅಲ್ಲಗಳೆಯಲು ಕೂಡ ಯಾರಿಗೂ ಸಾಧ್ಯವಿಲ್ಲ. ಇಲ್ಲಿ ನಮಗೆದುರಾಗುವ ಬೃಹತ್ ಪ್ರಶ್ನೆಗಳನ್ನು ನಾವು ಬದಿಗಿಟ್ಟು ನೋಡಿದರೂ, ನಮ್ಮಂತಹ ದೇಶದಲ್ಲಿ ಸ್ವಾವಲಂಬಿ ಶಿಕ್ಷಣವ್ಯವಸ್ಥೆಯ ಅಗತ್ಯವನ್ನು ಇತಿಹಾಸ ಮತ್ತು ಇತ್ತೀಚಿನ ಬೆಳವಣಿಗೆಗಳು ಸಮರ್ಥಿಸುತ್ತವೆ. ಟ್ಯಾಗೋರರು ಹಣಕಾಸಿನ ಕಾರಣದಿಂದಾಗಿ, ದಾಖಲು ಮಾಡಿಕೊಂಡ ಶ್ರೀಮಂತ ಮಕ್ಕಳ ಪೋಷಕರ ಒತ್ತಡಕ್ಕೆ ಮಣಿಯಬೇಕಾಗಿ ಬಂದದ್ದು ಅವರ ಶಾಂತಿನಿಕೇತನ ಪ್ರಯೋಗ ವಿಫಲವಾಗಲು ಕಾರಣವಾಗುತ್ತದೆ. ಇಲ್ಲಿ ನಾವು ಗಮನಿಸಬೇಕಾದ ಆಸಕ್ತಿಯ ವಿಷಯವೆಂದರೆ ಶ್ರೀನಿಕೇತನದಂತಹ ಪ್ರಯೋಗವನ್ನು ಪ್ರಾರಂಭಿಸಲುಅವರು ಎಲ್ಮ್‌ಹರ್ಸ್ಟ್ ಅವರು ವಿದೇಶದಿಂದ ತಂದ ಹಣದ ಬೆಂಬಲವನ್ನು ಅವಲಂಬಿಸಬೇಕಾಯಿತು. ಇದು ಸಿ. ಎಫ್. ಆ್ಯಂಡ್ರೂಸ್ ಅವರಿಗೆ ಅಸಮ್ಮತವಾಗಿತ್ತು.[52] ಆದರೆ ಶ್ರೀನಿಕೇತನದ ವೈಫಲ್ಯಕ್ಕೆ ಕಾರಣಗಳನ್ನು ಯಾವ ವಿದ್ವಾಂಸರೂ ಇಷ್ಟರವರೆಗೆ ವಿಶ್ಲೇಷಿಸಿಲ್ಲ. ಗ್ರಾಮೀಣ ಪುನರ್‌ನಿರ್ಮಾಣ ಶ್ರೀನಿಕೇತನ ಪ್ರಯೋಗದ ಮುಖ್ಯ ಉದ್ದೇಶವಾಗಿತ್ತು ಎಂಬುದರ ಬಗ್ಗೆ ಅನುಮಾನವೇ ಇಲ್ಲ. ಟ್ಯಾಗೋರರು ತಮ್ಮ 'ಸ್ವದೇಶಿ ಸಮಾಜ' ಎಂಬ ಲೇಖನದಲ್ಲಿ,"ನಾವು ನಮ್ಮ ರಾಷ್ಟ್ರೀಯ ಬದುಕನ್ನು ಗ್ರಾಮವನ್ನು ಕೇಂದ್ರವಾಗಿಸಿ ಪುನರ್‌ನಿರ್ಮಿಸಬೇಕಾಗಿದೆ," ಎಂದು ಹೇಳುತ್ತಾರೆ.[51] ಆದರೆ ಸುಧಾರಿತ ಕೋಳಿ ಸಾಕಣೆ, ಹಸುಸಾಕಣೆ, ವ್ಯವಸಾಯ, ಇತ್ಯಾದಿ ಯೋಜನೆಗಳ ಹೊರತಾಗಿಯೂ ಶ್ರೀನಿಕೇತನವು ಸ್ವಾವಲಂಬಿಯಾಗಲು ಸಾಧ್ಯವಾಗಲಿಲ್ಲ. ಅವರ ಎರಡನೆಯ ಶೈಕ್ಷಣಿಕ ಪ್ರಯೋಗವಾದ 'ಶಿಕ್ಷಾ ಸತ್ರ'ವು ಅಲ್ಪಕಾಲದಲ್ಲಿಯೇ ಇತರ ಸಾಮಾನ್ಯ ಶಾಲೆಗಳ ಮಟ್ಟಕ್ಕೆ ಇಳಿದುಹೋಯಿತು. ಶಾಂತಿನಿಕೇತನ ಶಾಲೆಯು ಅದರ ಆವಿಷ್ಕಾರಿ ಮತ್ತು ಪ್ರಾಯೋಗಿಕ ಗುಣವನ್ನು ಬಹು ಹಿಂದೆಯೇ ಕಳೆದುಕೊಂಡರೂ, ಟ್ಯಾಗೋರರ ನಿರೀಕ್ಷೆಯನ್ನು ಮೀರಿ, ಬಹುಶಃ ಅದರ ಮೇಲ್ವರ್ಗೀಯ (ಕಲ್ಕತ್ತಾ ಅಂದುಕೊಳ್ಳಿ) ಸಂಪರ್ಕದ ಕಾರಣದಿಂದಾಗಿ ತನ್ನ ಆಕರ್ಷಣೆಯನ್ನು ಉಳಿಸಿಕೊಂಡಿತು, ಆದರೆ 'ಶಿಕ್ಷಾ ಸತ್ರ'ವು ಹೇಳಹೆಸರಿಲ್ಲದಂತಾಯಿತು.

ಪ್ರಾಸಂಗಿಕವಾಗಿ ಹೇಳುವುದಾದರೆ, ಸ್ವಾತಂತ್ರ್ಯ ಸಿಕ್ಕಿ 49 ವರ್ಷಗಳ ನಂತರವೂ ಪ್ರಾಥಮಿಕ ಶಿಕ್ಷಣದ ಅಗತ್ಯಗಳನ್ನು ಪೂರೈಸಲು ಮೂಲಧನದ ಸಂಗ್ರಹಕ್ಕಾಗಿ ಭಾರತವು ಇತರ ದೇಶಗಳೆದುರು ಕೈಯೊಡ್ಡಬೇಕಾಗಿದೆ. ಭಾರತದ ಶಿಕ್ಷಣನೀತಿಯನ್ನು ರೂಪಿಸಲು ವಿಶ್ವಬ್ಯಾಂಕ್‌ಗೆ ಅವಕಾಶವನ್ನು ನೀಡಲಾಗಿದೆ. ಅಷ್ಟೇ ಅಲ್ಲದೆ, ಇನ್ನೊಂದು ವಿಪರ್ಯಾಸವೆಂದರೆ, ಒಂದು ಕಾಲಕ್ಕೆ ಕಲ್ಕತ್ತಾದ ಗೋಡೆಗಳ ಮೇಲೆಲ್ಲಾ ವಿಶ್ವಸಂಸ್ಥೆಯನ್ನು ಜರಿಯುವ ಭಿತ್ತಿ ಚಿತ್ರಗಗಳನ್ನು ವರ್ಣದಲ್ಲಿ ಚಿತ್ರಿಸುತ್ತಿದ್ದಹಾಗೂ ಅದರ ಅಧಿಕಾರಿಗಳನ್ನು ನಮ್ಮ ದೇಶಬಿಟ್ಟು ತೊಲಗುವಂತೆ ಘೋಷಣೆಗಳನ್ನು ಕೂಗುತ್ತಿದ್ದ ಬಂಗಾಳಿ ಮಾರ್ಕ್ಸಿಸ್ಟರು ಇಂದು ಇದಕ್ಕೆ ಸಂಪೂರ್ಣ ವ್ಯತಿರಿಕ್ತವಾಗಿ ಇದೇ ಬ್ಯಾಂಕ್ ಅಧಿಕಾರಿಗಳನ್ನು ಕೆಂಪು ಹಾಸು ಹಾಸಿ ಬರಮಾಡಿಕೊಂಡು, ಅವರ ಸಹಾಯವನ್ನು ಬಯಸುತ್ತಿದ್ದಾರೆ. ವಿದೇಶಿ ಸಂಸ್ಥೆಗಳ ದೇಣಿಗೆ ಪಡೆದು ಆರಂಭಿಸಿದ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಯೊಂದಿಗೆ (District Primary Education Project) ಸೇರಿ, ಪ್ರಸ್ತುತದ ಈ ಜನಪ್ರಿಯ ಹಾಗೂ ಹೆಚ್ಚು ಬೆಂಬಲವನ್ನು ಸೆಳೆಯುತ್ತಿರುವ ಪ್ರಕ್ರಿಯೆಯೊಂದಿಗೆ ಮಿಳಿತಗೊಳ್ಳಲು ಅವರಿಗೆ ಯಾವುದೇ ಮುಜುಗರ ಇದ್ದಂತಿಲ್ಲ. ಬಂಗಾಳಿ ಮಾರ್ಕ್ಸಿಸ್ಟರ ಬೌದ್ಧಿಕ ದಾರಿದ್ರ್ಯ ಎಷ್ಟಿದೆಯೆಂದರೆ ಪ್ರಾಥಮಿಕ ಶಾಲಾ ಇಂಗ್ಲಿಷ್ ಪಠ್ಯಗಳನ್ನು ಸಿದ್ಧಪಡಿಸಲು ಕೂಡ ಅವರು ಬ್ರಿಟಿಷ್ ಪರಿಣತಿಯ ಸಹಾಯ ಕೇಳುತ್ತಾರೆ. ವಿದೇಶಿ ದೇಣಿಗೆಯು ಸರಕಾರಿ ಶಾಲಾ ವ್ಯವಸ್ಥೆಯ ಹದಗೆಟ್ಟ ಪರಿಸ್ಥಿತಿಯನ್ನು ಸುಧಾರಿಸಬಲ್ಲದು ಎಂದು ಯೋಚಿಸುವುದು ಕೂಡ ಹಾಸ್ಯಾಸ್ಪದ. ಇಷ್ಟೊಂದು ವಿದೇಶಿ ಹಣ ಒಂದೇ ಸಾರಿ ಒಟ್ಟಾಗಿ ಹರಿದುಬರುವಾಗ, ಶಿಕ್ಷಣ ವ್ಯವಸ್ಥೆಯಲ್ಲಿ ಈಗಾಗಲೇ ಹಾಸುಹೊಕ್ಕಿರುವ ಭ್ರಷ್ಟಾಚಾರವನ್ನು ಅದು ತೀವ್ರಗೊಳಿಸಿ, ತಳಮಟ್ಟದವರೆಗೂ ವ್ಯಾಪಿಸುತ್ತದೆ..

ಸ್ವಾವಲಂಬಿ ಶಿಕ್ಷಣ ವ್ಯವಸ್ಥೆಯ ಬಗ್ಗೆ ಗಾಂಧಿಯವರ ಆಲೋಚನೆ ಹೇಗಿತ್ತೆಂಬುದನ್ನು ಈ ಸಂದರ್ಭದಲ್ಲಿ ಕ್ಲುಪ್ತವಾಗಿ ಚರ್ಚಿಸುವುದು ಸೂಕ್ತ. ಉತ್ಪಾದನಾ ಕೆಲಸ ಮಾಡುವ ಮೂಲಕ ಒಬ್ಬ ವಿದ್ಯಾರ್ಥಿ ಎಷ್ಟು ಸಂಪಾದನೆ ಮಾಡಬಹುದು ಎಂಬುದನ್ನು ಲೆಕ್ಕ ಹಾಕುವ ಪ್ರಯತ್ನ ಮಾಡಲಾಯಿತು. ಎರಡನೆಯ ವರ್ಷದಿಂದ ಒಬ್ಬ ವಿದ್ಯಾರ್ಥಿಯು ಒಂದು ಗಂಟೆಗೆ ಒಂದು ಅಣೆಯ ಲೆಕ್ಕದಲ್ಲಿ ದಿನಕ್ಕೆ ನಾಲ್ಕು ಗಂಟೆಯ ಪ್ರಮಾಣದಲ್ಲಿ ತಿಂಗಳಲ್ಲಿ 26 ದಿನ ಕೆಲಸ ಮಾಡಿದರೆ, ಅವನು ತಿಂಗಳಿಗೆ ಒಟ್ಟು ಆರು ರೂಪಾಯಿ ಮತ್ತು ಎಂಟು ಆಣೆ ಸಂಪಾದಿಸುತ್ತಾನೆ.[54] ಮೂಲ ಶಿಕ್ಷಣ ಯೋಜನೆಯಲ್ಲಿ ಶಿಕ್ಷಕರ ಸಂಬಳವನ್ನು ತಿಂಗಳಿಗೆ 25 ರೂಪಾಯಿ ಎಂದು ನಿಗದಿಪಡಿಸಲಾಗಿತ್ತು. 25 ವಿದ್ಯಾರ್ಥಿಗಳು ತಮ್ಮ ತಿಂಗಳ ಸಂಪಾದನೆಯಿಂದ ತಿಂಗಳಿಗೆ ಎರಡು ರೂಪಾಯಿ ಪಾವತಿಸಿದರೆ ಇಬ್ಬರು ಶಿಕ್ಷಕರ ಸಂಬಳವನ್ನು ಭರಿಸುವುದು ಸಾಧ್ಯವಿತ್ತು. ಇನ್ನೂ ಅವರ ಬಳಿ ತಿಂಗಳಿಗೆ ನಾಲ್ಕು ರೂಪಾಯಿ ಎಂಟುಆಣೆ ಉಳಿದಿರುವುದು. ಬಂಗಾಳದಲ್ಲಿ 1930ನೇ ದಶಕದಲ್ಲಿ ಕೃಷಿ ಕಾರ್ಮಿಕನೊಬ್ಬನ ತಿಂಗಳ ಸಂಪಾದನೆ ಸುಮಾರು 20 ರೂಪಾಯಿಯಷ್ಟಿರುತ್ತಿತ್ತು. ಸೆಣಬು ಬೆಳೆಯ ಕೊಯ್ಲಿನ ಕಾಲದಲ್ಲಿ ಕಾರ್ಮಿಕರಿಗೆ ದೊರಕುತ್ತಿದ್ದ ಗರಿಷ್ಠ ಕೂಲಿ ದಿನಕ್ಕೆ 11 ಆಣೆ. ಕೆಲಸ ಕಡಿಮೆ ಇದ್ದ ಕಾಲದಲ್ಲಿ ಅದು ದಿನಕ್ಕೆ ಮೂರು ಅಣೆಗೆ ಇಳಿಯುತ್ತಿತ್ತು. ಕೃಷಿ ಕಾರ್ಮಿಕನಾದವನು ಬೆಳಿಗ್ಗೆಯಿಂದ ಸಂಜೆ ತನಕ ದುಡಿಯಬೇಕಾಗುತ್ತದೆ. ಊಟಕ್ಕೆ ಅರ್ಧ ಗಂಟೆಯಿಂದ ಒಂದು ಗಂಟೆ ಬಿಡುವು ಅಷ್ಟೆ. ಆ ಕಾಲಕ್ಕೆ ಪೂರ್ವ ಬಂಗಾಲದಲ್ಲಿ ಒಂದು ರೂಪಾಯಿಗೆ ಏಳು ಸೇರು ಅಕ್ಕಿ ಸಿಕ್ಕಿದರೆ, ಬರ್ದ್ವಾನ್‌ನಲ್ಲಿ ಒಂದು ರೂಪಾಯಿಗೆ 11 ಸೇರು ಅಕ್ಕಿ ಸಿಗುತ್ತಿತ್ತು.[55] ಹೀಗಿರುವಾಗ ಒಬ್ಬ ವಿದ್ಯಾರ್ಥಿಯು ಒಂದು ತಿಂಗಳಿಗೆ ಒಂದು ಮಣ (38 ಕಿ.ಗ್ರಾಂ) ಅಕ್ಕಿಯನ್ನು ಸುಲಭವಾಗಿ ಸಂಪಾದಿಸಬಹುದಿತ್ತು. ಇದರಿಂದ ಕೃಷಿಕನ ಕುಟುಂಬಕ್ಕೆ ಹೆಚ್ಚಿನ ಸಹಾಯವಾಗುವಲ್ಲಿ ಸಂದೇಹವಿರಲಿಲ್ಲ. ಇಷ್ಟು ಸಂಪಾದನೆ ಮಾಡಲು ಸಾಧ್ಯವಾದಲ್ಲಿ ಈ ಕುಟುಂಬದ ಮಕ್ಕಳು ಬೆಳಿಗ್ಗೆ ಒಂದು ಹೊತ್ತಿನ ಗಂಜಿ ಊಟ ಮಾಡಿ ಶಾಲೆಗೆ ಬರಲು ಸಾಧ್ಯವಾಗುತ್ತಿತ್ತು. ಗ್ರಾಮೀಣ ಬಂಗಾಲದ ಆರ್ಥಿಕ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡವರಿಗೆ ಇಂತಹ ಸಂಪಾದನೆಯ ಅಗತ್ಯ ಖಂಡಿತ ಅರ್ಥವಾಗುತ್ತದೆ. ಕಾರ್ಮಿಕ ವರ್ಗದ ಮಕ್ಕಳು ಹೊಟ್ಟೆ ತುಂಬ ಊಟ ಸಿಕ್ಕಿದರೆ ಸಂತೋಷವಾಗಿ ಕೆಲಸ ಮಾಡುತ್ತಾರೆ. ಅವರಿಗೆ ಕೆಲಸ ಮಾಡಲು ಸಂಕೋಚವಿಲ್ಲ.; ಅವರಿಗೆ ಅದು ರೂಢಿಗತ. ಕೃಷಿಸಮುದಾಯದಲ್ಲಿ ಕೆಲಸ ಎನ್ನುವುದು ಸಂಪಾದನೆಯ ಮಾರ್ಗ ಒಂದೇ ಅಲ್ಲ ಬದಲಿಗೆ ಅದು ಒಂದು ಜೀವನ ಶೈಲಿ ಕೂಡ. ಕೃಷಿಸಮುದಾಯಗಳ ಕೆಲಸದ ಸಂಸ್ಕೃತಿಯನ್ನು ಅರ್ಥಮಾಡಿಕೊಳ್ಳದೆ ಗಾಂಧಿಯವರ ಶಿಕ್ಷಣಯೋಜನೆಯನ್ನು ಶ್ಲಾಘಿಸಲು ಸಾಧ್ಯವಾಗದು.

ನನಗನ್ನಿಸುವ ಪ್ರಕಾರ, ಆಟೋಟ ಹಾಗೂ ಸಾಹಸೀ ಕೃತ್ಯಗಳು ಟ್ಯಾಗೋರರ ಶಿಕ್ಷಣದ ಪರಿಕಲ್ಪನೆಯ ಮುಖ್ಯ ಭಾಗವಾಗಿದ್ದಂತೆ ಉತ್ಪಾದನಾ ಕೆಲಸವು ಗಾಂಧಿಯವರ ಶಿಕ್ಷಣದ ಪರಿಕಲ್ಪನೆಯ ಮುಖ್ಯ ಭಾಗವಾಗಿತ್ತು. ಟ್ಯಾಗೋರರು ಕೆಲಸವನ್ನು ಆಟದ ರೀತಿಯಲ್ಲಿ ಪರಿವರ್ತಿಸಲು ಇಚ್ಛಿಸಿದರೆ ಗಾಂಧಿಯವರು ಕೆಲಸದಲ್ಲಿ ಆಟವನ್ನು ಕಂಡುಕೊಂಡಿದ್ದರು. ಟ್ಯಾಗೋರರ ಶಿಕ್ಷಣದ ಪರಿಕಲ್ಪನೆಯಲ್ಲಿ ಪ್ರಕೃತಿ, ಸೃಜನಾತ್ಮಕ ಕಲೆಗಳಾದ ಸಂಗೀತ, ನೃತ್ಯ, ನಾಟಕ, ವರ್ಣಕಲೆ ಇತ್ಯಾದಿಗಳು ಪ್ರಮುಖ ಪಾತ್ರವನ್ನು ವಹಿಸಿದ್ದವು. ಗಾಂಧಿಯವರು ಕೂಡ ಸಂಗೀತ ಮತ್ತು ಚಿತ್ರಕಲೆಗೆ ಪ್ರಾಮುಖ್ಯ ನೀಡಿದ್ದರಾದರೂಅವರು ಉತ್ಪಾದನಾ ಕೆಲಸದಲ್ಲಿನ ಹಸ್ತನೈಪುಣ್ಯದಲ್ಲಿ ಸೌಂದರ್ಯದ ಹುಡುಕಾಟ ನಡೆಸಿದ್ದರು. ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳು ಅವರ ಯೋಚನಾ ಕ್ರಮದಲ್ಲಿ ಸದಾ ಹಾಸುಹೊಕ್ಕಾಗಿದ್ದವು. ಟ್ಯಾಗೋರ್ ಅವರು ತಮ್ಮ ಪ್ರವೃತ್ತಿಗನುಸಾರವಾಗಿ ವಿಶ್ರಾಂತ ಸಂಸ್ಕೃತಿಯ ಗುಣಗಳನ್ನು ಕೊಂಡಾಡಿದರೆ, ಗಾಂಧಿಯವರು ಅವರ ಪ್ರವೃತ್ತಿಗನುಸಾರವಾಗಿ ಕಾಯಕದ ಸಂಸ್ಕೃತಿಯನ್ನು ಎತ್ತಿಹಿಡಿದರು. ಈ ವಿಚಾರಕ್ಕೆ ಸಂಬಂಧಿಸಿದಂತೆ ಜೀವನದ ಬಗೆಗಿನ ದೃಷ್ಟಿಕೋನದಲ್ಲಿ ಅವರಿಬ್ಬರ ನಡುವೆ ಮೂಲಭೂತವಾದ ವ್ಯತ್ಯಾಸವಿತ್ತು. ಆದರೆ

ಅವರಿಬ್ಬರೂ ಪ್ರೀತಿ ಮತ್ತು ಸ್ವಾತಂತ್ರ್ಯಕ್ಕೆ ನೀಡಿದ ಮೌಲ್ಯ ಅಪರಿಮಿತವಾಗಿತ್ತು. ಇಬ್ಬರೂ ಕೂಡ ಪಾಶ್ಚಾತ್ಯ ಗ್ರಾಹಕ ಸಂಸ್ಕೃತಿಯನ್ನು ತಿರಸ್ಕರಿಸಿದ್ದರು. ನಿರಾಡಂಬರ ಮತ್ತು ದೈಹಿಕ ಶ್ರಮ ಗಾಂಧಿಯವರ ಮಾನವೀಯ ಮೌಲ್ಯಗಳ ಮೂಲ ಅಂಶಗಳಾಗಿದ್ದವು. ಟ್ಯಾಗೋರರು ಕೂಡ ನಿರಾಡಂಬರದ ಜೀವನ ಮತ್ತು ಕಾಯಕದ ಹಿರಿಮೆಯನ್ನು ಗೌರವಿಸಿದ್ದರು ಆದರೆ ಅವರ ಪ್ರಕಾರ ಅರ್ಥಪೂರ್ಣ ಜೀವನದ ಪರಿಕಲ್ಪನೆಯ ಮೂಲದಲ್ಲಿ ಇದ್ದುದು ‘ಬಿಡುವು’. ವಿದ್ವಾಂಸರೊಬ್ಬರು ಹೇಳಿದ ಮಾತು ಸತ್ಯ: ಟ್ಯಾಗೋರರು ‘ಭಕ್ತಿಮಾರ್ಗ’ವನ್ನು ತುಳಿದರೆ, ಗಾಂಧಿಯವರು ಆರಿಸಿಕೊಂಡದ್ದು ‘ಕರ್ಮ ಮಾರ್ಗ’.

## Notes

(A revised version of 'Second Gijubhai Lecture in Education' delivered at Jesus and Mary College, New Delhi, on November 13, 1995.)


1. 1 Tagore, R, Swadeshi Samaj. Visva-Bharati, 1393 (BS); Gandhi M K Gandhi Rachana Sambhar (translated by Sachin Chandra Dasgupta). Gandhi Satabarshik Samily, West Bengal, Vol III, pp 3-65. Calcutta, 1970.
2. 2 Tagore, R, Shikshar Swongikaran' (written in 1936), Shiksha, Visva-Bharati,p236,1397, (BS).
3. 3 Tagore, R'Shikshar Bikiran'(written in 1933), Shiksha. op cit, p 216.
4. 4 Tagore, R, 'Shikshar Swangikaran'. op cit, p 238.
5. 5 Gandhi. M K. op cit. Vol V, pp 268. 271; Collected Works, Navajiban Trust, 1966, pp 39-40.
6. 6 Gandhi, M K. Rachana Sambhar, op cit, Vol V, p 375, Educational Reconstruction, Report of Zakir H us sum Committee, Vora and Co, Bombay, 1938.
7. 7 Das and Chatterjee, Shiksha Satra, VisvaBharati, Srinikelan, 1984. p 58; Roy, Satyendranath, Shiksha Chinta, Rabindranather Chinta Jagat, Rabindra Rachana Samkalan, 1982, Granthalaya, Calcutta, p 74.
8. 8 Roy,Satyendranath, ibid, pp 176-177;Tagore, R, Shiksha, op cit, pp 242-43; Jiban Smriti, Visva-Bharati, 1387 (BS), pp 32-33.
9. 9 Gandhi, M K. Collected Works, op cit, vol XX, 1966, p 43.
10. 10 Gandhi, M K, Rachana Sambhar. op cit. Vol V, p 254.
11. 11 Acharya. Poromesh,'Is Macaulay Still Our Guru?'. Economic and Political Weekly, May 28, 1988, p 1126.
12. 12 Gandhi. M K, Collected Works, op cit, Vol XX, pp 42-43.
13. 13 Roy, Satyendranath. op cit, p 24.
14. 14 Tagore, R, Ideal of Visva-Bharati, Proceeding of the Bengal Education Week. 1936, Vol 1, Calcutta, 1937, pp 78-83; Also, Vidya Samabaya in Siksha, op cit.
15. 15 Roy, Satyendranath, Shiksha Chinta, op cit, p24.
16. 16 Gandhi, M K, Rachana Sambhar, op cit. Vol V, p 244.
17. 17 Chattopadhaya, Saratchandra. Sarat Sahitya Sumagra, Vol 2, pp 1962-69, Ananda Publishers, Calcutta, 1393 (BS).
18. 18 Chattopadhaya, Sarat Chandra, Ibid, pp 196869.
19. 19 lllich, Ivan, Deschooling Society, Penguin Books, 1971.
20. 20 Roy, Satyendranath, op cit. p 26.

21. 21 Roy Satyendranath, ibid. Mayhew, Arther, Pre-lndependence Educational Policy of India - A Study of British Educational Policy in India (reprint), New Delhi. 1988. ಟಾಗೋರರು ಭೋಲ್‌ಪುರದಲ್ಲಿ ಕೈಗೊಂಡ ಶೈಕ್ಷಣಿಕ ಪ್ರಯೋಗಗಳಲ್ಲಿನ 'ಸಾಂಸ್ಕೃತಿಕ ಸಮ್ಮಿಳನ'ದ ಸಾಧ್ಯತೆಯನ್ನು ಆರ್ಥರ್ ಮೇಹ್ಯೂ ಅವರು ಕೂಡ ಚರ್ಚಿಸಿದ್ದನ್ನು ನಾವು ಗಮನಿಸಬೇಕು. ಮೇಹ್ಯೂ ಬರೆಯುತ್ತಾರೆ: "ಭೋಲ್‌ಪುರದಲ್ಲಿ ತಮ್ಮ ಶೈಕ್ಷಣಿಕ ಕಾರ್ಯಗಳ ಮೂಲಕ, ಮತ್ತು ಅದಕ್ಕಿಂತಲೂ ಹೆಚ್ಚಾಗಿ ತಮ್ಮ ದಾರ್ಶನಿಕತೆ, ಕಾವ್ಯ ಮತ್ತು ಕಾದಂಬರಿಗಳ ಮೂಲಕ ಟಾಗೋರರು ಪೌರಾತ್ಯ ಮತ್ತು ಪಾಶ್ಚಿಮಾತ್ಯ ಸಂಸ್ಕೃತಿಗಳ ನಿಜವಾದ ಸಮ್ಮಿಳನ ಸಾಧ್ಯ ಎಂಬುದರ ಪುರಾವೆಯಾಗಿ ಕಾಣಿಸಿಕೊಳ್ಳುತ್ತಾರೆ. ಈ ಭರವಸೆಗೆ ಇಂಬು ಕೊಡುವಂತೆ ಭೋಲ್‌ಪುರದಲ್ಲಿ ನಾವು ನೋಡಲು ಸಾಕಷ್ಟಿದೆ... ಆದ್‌ರೆ ಅವರ ಅದ್ಭುತ ಕಾದಂಬರಿ, 'ಮನೆ ಮತ್ತು ಜಗತ್ತು' ಇಂತಹ ಸಮ್ಮಿಳನದ ಆಕರ್ಷಕ ಸಾಧ್ಯತೆಯನ್ನು ತೋರಿಸುವುದಷ್ಟೇ ಅಲ್ಲದೆ, ಅದರ ಕಷ್ಟ ಕಾರ್ಪಣ್ಯವನ್ನು ಕೂಡ ತೋರಿಸಿಕೊಡುತ್ತದೆ." ಮೇಹ್ಯೂ ಅವರು, 'ಇಂಗ್ಲಿಷ್ ಶಿಕ್ಷಣವು ಭಾರತದಲ್ಲಿ ತನ್ನ ಸಂಸ್ಕೃತಿಯಿಂದ ದೂರವಾದ ಆದರೆ ಪಾಶ್ಚಾತ್ಯ ಜಗತ್ತಿನೊಂದಿಗೆ ಇನ್ನೂ ಮಿಳಿತವಾಗದೆ ಇರುವಂತಹ ಒಂದು ಶಿಕ್ಷಿತ ಸಮಾಜವನ್ನು ಸೃಷ್ಟಿಸಿದೆ,' ಎಂದು ಅಭಿಪ್ರಾಯಪಡುತ್ತಾರೆ. ಅವರು ಬರೆಯುತ್ತಾರೆ, "ನಾವು ಅವನನ್ನು ಅಸಂತುಷ್ಟನನ್ನಾಗಿ ಅವನ ಜಗತ್ತಿಗೆ ಹಿಂದೆ ಕಳುಹಿಸಿದ್ದೇವೆ. ಆ ಜಗತ್ತು ಅವನಿಗೆ ತಾನು ಒಳಗೊಳ್ಳಲಾಗದೆ ಹೋದ ಪಶ್ಚಿಮ ಜಗತ್ತಿನೊಂದಿಗೆ ಇರುವ ವೈರುಧ್ಯಗಳ ಕಾರಣಕ್ಕಾಗಿ ಹೆಚ್ಚು ತೀವ್ರವಾಗಿ ಕಾಡುತ್ತದೆ, ಆದರೆ ಅದು ಅವನ ತರ್ಕಕ್ಕೆ ಸಿಗುವುದಿಲ್ಲ. ಒಂದೆಡೆ ತನ್ನ ಆರ್ಥಿಕ ಅಥವ ವೃತ್ತಿಜೀವನ ಮತ್ತು ಇನ್ನೊಂದೆಡೆ ತಾನು ಆರ್ಥಿಕವಾಗಿ ಮತ್ತು ರಾಜಕೀಯವಾಗಿ ನೆಲೆನಿಂತಿರುವ ಹೊರಜಗತ್ತಿನೊಂದಿಗೆ ಅವನಿಗೆ ಒಂದು ಆರೋಗ್ಯಕರ ಸಂಬಂಧ ಏರ್ಪಡುವುದು ಶಕ್ಯವಾಗುವುದಿಲ್ಲ. (ಿ 207) ಯಾವುದೇ ಪರ್ಯಾಯ ಶಿಕ್ಷಣದ ಪ್ರಯೋಗ ಮಾಡುವಾಗ ನಾವು ಆರ್ಥಿಕ ಮತ್ತು ರಾಜಕೀಯ ಪ್ರಶ್ನೆಗಳನ್ನು ಪರಿಗಣಿಸಬೇಕಾಗಿರುವುದು ಅಗತ್ಯ ಎಂಬುದು ಸ್ಪಷ್ಟ. ಇದು ಗಾಂಧಿಯವರಿಗೆ ಮಾತ್ರ ಅದರ ಒಟ್ಟಂದದಲ್ಲಿ ಅರ್ಥಮಾಡಿಕೊಳ್ಳಲು ಸಾಧ್ಯವಾಯಿತು. ಇಂಗ್ಲಿಷ್ ಶಿಕ್ಷಣ ಪಡೆದ ಭಾರತೀಯರ ಪರಿಸ್ಥಿತಿಯನ್ನು ಮೇಹ್ಯೂ ಅವರು ತಮ್ಮ ಈ ಮಾತುಗಳಲ್ಲಿ ಸೂಕ್ತವಾಗಿ ವಿವರಿಸುತ್ತಾರೆ: "ಯಾವುದೇ ಇತಿಹಾಸದ ಪದವೀಧರನನ್ನು ಹದಿನೇಳನೆ ಶತಮಾನದಲ್ಲಿ ಇಂಗ್ಲೆಂಡಿನಲ್ಲಿ ಚಲಾವಣೆಯಲ್ಲಿದ್ದ ತಾತ್ವಿಕ ವಿಚಾರಗಳ ಬಗ್ಗೆ ಕೇಳಿ, ಅವನು ಅದಕ್ಕೆ ನಿಮಗೆ ಸೂಕ್ತ ಉತ್ತರ ಕೊಡುತ್ತಾನೆ; ಆದರೆ ಅದಕ್ಕೂ ಅವರಿಗೂ ಏನೂ ಸಂಬಂಧವಿರುವುದಿಲ್ಲ. ಆದರೆ, ಅವನನ್ನು ನೀವು ಅವನ ಜಾತಿ, ಧರ್ಮ, ನಂಬಿಕೆಗಳ ಬಗ್ಗೆ ಅಥವ ಅವನ ಊರಿನ ಜನರ ನಂಬಿಕೆಗಳು, ಸ್ಥಳೀಯ ದೇವಾತಾರಾಧನೆಗಳ ಬಗ್ಗೆ ಕೇಳಿದರೆ ಅವನಲ್ಲಿ ಅದಕ್ಕೆ ಉತ್ತರವಿರುವುದಿಲ್ಲ ಅಥವ ಅದರ ಬಗ್ಗೆ ಅವನು ಆಶ್ಚರ್ಯಪಡುವಷ್ಟು ಗೊಂದಲಕ್ಕೀಡಾಗುತ್ತಾನೆ ಅಥವ ಮಾತಿನಲ್ಲಿ ಅಸಂಬದ್ಧತೆ ಎದ್ದುಕಾಣುತ್ತದೆ. ವಿಪರ್ಯಾಸವೆಂದರೆ, ಈ ಸಂಗತಿಗಳು ಪರಂಪರಾನುಗತವಾಗಿ ಅವನ ಜೀವನದ ಭಾಗವಾಗಿರುತ್ತವೆ. (ಿ 182) ಒಂದು ಸಂಸ್ಕೃತಿಯನ್ನು ಹೊಗಳುವುದರಿಂದ ಅಥವ ಇನ್ನೊಂದು ಸಂಸ್ಕೃತಿಯನ್ನು ನಿಕೃಷ್ಟವಾಗಿ ನೋಡುವುದರಿಂದ ಸಾಂಸ್ಕೃತಿಕ ಸಮ್ಮಿಳನ ಸಾಧ್ಯವಾಗುವುದಿಲ್ಲ. ಭಾರತದಲ್ಲಿ ಇಂಗ್ಲಿಷ್ ಶಿಕ್ಷಣ ತಂದಿಟ್ಟ ಇಂತಹ ಅಸಂಗತತೆಯನ್ನು ನಿವಾರಿಸುವುದು ಟಾಗೋರರ ಶೈಕ್ಷಣಿಕ ಪ್ರಯೋಗಗಳ ಗುರಿಯಾಗಿತ್ತು. ಆದರೆ ಬೆಂಗಾಲಿ ಮಧ್ಯಮವರ್ಗವು ತನ್ನದೇ ಆದ ಸಂಕುಚಿತ ಆರ್ಥಿಕ ಕಾರಣಗಳಿಗಾಗಿ ಇದನ್ನು ಮೆಚ್ಚಲಿಲ್ಲ.
22. Bose, Nirmal Kumar, Studies in Gandhism, Caloilta, 1962, pp 39-41.
23. Bose. Nirmal Kumar, ibid, p 41.
24. Tagore, R, 'Tapoban', Shiksha, op cit, p 96
25. Tagore, R, ibid.
26. Roy, Satyendranath, op cit, p 319.

27. Roy, Satyendranath, ibid, p 322.
28. Sarkir, Sunil Chandra, Tagore's Educational Philosophy and Experiment, Visva-Bharati, 1961, p 180.
29. Sarkir, Sunil Chandra, ibid.
30. Roy, Satyendranath, op cit, p 325.
31. Sarkir, Sunil Chandra, op cit, p 181.
32. Tagore, R, Naibedva, Visva-Bharati, 1400 (BS).
33. Roy, Satyendranath, op cit, p 19.
34. Tagore, R, Achalayatan, Visva-Bharati, 1397 (BS), pp 103-11.
35. Tagore, R,Balaka, Visva-Bharati, 1401 (BS), pp 118, 143, 146, 149-150, 177.
36. Tagore, R, Shiksha, op cit. pp 229, 236.
37. Bhattacharya, Sabyasachi, 'Rabindranath Tagore's Educational Philosophy and VisvaBharati' in Patha Bhavana: A Poet's School, Visva-Bharati. Santinikelan, 1993. ‘ಲೋಕಶಿಕ್ಷಣ’ ಅಥವ ಸಾರ್ವಜನಿಕ ಶಿಕ್ಷಣದ ಕುರಿತಂತೆ ಟ್ಯಾಗೋರರ ಕಾಳಜಿಯನ್ನು ಅವರ ಆರಂಭದ ಹಲವು ಬರವಣಿಗೆಗಳಲ್ಲಿ ನಾವು ಕಾಣುತ್ತೇವೆ. ಉದಾಹರಣೆಗೆ, 1905ರ ಇಸವಿಯಷ್ಟು ಹಿಂದೆಯೇ ಅವರದೇ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿದ್ದ ‘ಭಂಡಾರ್’ ನಿಯತಕಾಲಿಕದಲ್ಲಿ ಅವರು ಬರೆದ ‘ಇತಿಹಾಸ್‌ಕಥಾ’ ಲೇಖನದಲ್ಲಿ ಕೂಡ ನಾವು ಇದನ್ನು ನೋಡಬಹುದು. ಈ ಲೇಖನದಲ್ಲಿ ಅವರು ಜಾನಪದ ಮನೋರಂಜನಾ ಪ್ರಾಕಾರಗಳು ಮತ್ತು ಜಾತ್ರೆಗಳು ಯಾವ ರೀತಿಯಾಗಿ ಜನಸಮುದಾಯದ ಶಿಕ್ಷಣದಲ್ಲಿ ಅರ್ಥಪೂರ್ಣ ಪಾತ್ರ ವಹಿಸಬಲ್ಲವು ಎಂಬುದನ್ನು ಚರ್ಚಿಸುತ್ತಾರೆ. ಇತಿಹಾಸವನ್ನು ಶಾಲೆಗಳಲ್ಲಿ ಕಲಿಯುವುದಕ್ಕಿಂತ ಹೆಚ್ಚು ಪರಿಣಾಮಕಾರಿಯಾಗಿ ಈ ಅನೌಪಚಾರಿಕ ಮಾಧ್ಯಮಗಳ ಮೂಲಕ ಕಲಿಯಬಹುದು ಎಂಬುದು ಅವರ ನಂಬಿಕೆಯಾಗಿತ್ತು. ಈ ಅನೌಪಚಾರಿಕ ಮಾಧ್ಯಮಗಳನ್ನು ಈ ಉದ್ದೇಶಕ್ಕಾಗಿ ಬಳಸುವ ಕುರಿತಂತೆ ಅವರು ಒಂದು ಯೋಜನೆಯನ್ನು ಕೂಡ ಪ್ರಸ್ತಾವಿಸಿದ್ದರು. ಹಾಗೆಯೇ 1930ರ ಮಧ್ಯಭಾಗದಿಂದ ‘ಲೋಕಶಿಕ್ಷಣ’ವು ಅವರ ಕಾರ್ಯಯೋಜನೆಯ ಮುಖ್ಯ ಭಾಗವಾಗಿತ್ತು ಎಂಬುದು ಕೂಡ ಸತ್ಯ.
38. Sarkir, Sunil Chandra. 'Education in Free lnda and Its Central Purpose', The Visva-Bharati Quarterly, Education Number, Vol VIII, parts I and II, 1947, p 87.
39. Basu, Anathnath, Tagore's Educational Philosophy in Relation to Basic Education', ibid, p 50.
40. Gandhi, M K, 'Educational Reconstruction', op cit, p 22.
41. Gandhi, M K, Collected Works, op cit. Vol XXI, p 38.
42. Gandhi, M K, ibid, Vol XX, p 225.
43. Gandhi, M K, ibid. Vol XIII, p 300.
44. Bose, Nirmal Kumar, op cit, p 203.
45. A BTA, Shiksha-O-Sahitya, Magh 1344(BS), Calcutta.
46. Gandhi, M K. "Educational Reconstruction', op cit, p 74.
47. Gandhi, M K. ibid, p 75.
48. Gandhi, M K, ibid, p 75,
49. Gandhi, M K, ibid, p 79.
50. Gandhi, M K, ibid, p 27.

51. Gandhi, M K, Collected Works, op cit. Vol XX, p 225.
52. Elmhirst, L K, Peet and Plowman, VisvaBharati. 1975. pp 29-30. It has been written that Andrews told Elmhirst, "Gandhi declared himself in doubt as to whether any work in India that was financed by monies raised from abroad, could bring to India permanent benefit". Elmhirst noted that after the death of Andrews, he asked Gandhi about this and Gandhi answered, "I cannot imagine my everexpressing to Andrews such an opinion or using just those terms". I wonder why Elmhirst asked Gandhi after the death of Andrews. Whatever may be the truth, there is no doubt that Andrews had reservation against foreign funded education programme, as otherwise he would not have raised this question.
53. Elmhirst, L K, ibid, p 166; Sen, Sudhir, Rabindranath Tagore on Rural Reconstruction, Visva-Bharati, 1943, p 9.
54. Gandhi, M K, 'Educational Reconstruction', op cit, p 20.
55. Government of Bengal, Bengal Provincial Banking Enquiry Committee Report. 1929-30, Vol 1. Calcutta, p 33; Report of the Bengal Paddy and Rice Enquiry Committee, Vol 1, 1940.